# ಅಧ್ಯಾಯ - ೧

# ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಿತಿಗಳು

ಡಾ. ಕೆ. ಶಿವರಾಮ ಕಾರಂತರು ಕನ್ನಡ ನಾಡಿನ ಬಹುಮುಖ ಪ್ರತಿಭೆಯ ಚಿಂತಕ, ವಿಚಾರವಾದಿ, ವಾಸ್ತವವಾದಿ ಸಾಹಿತಿಯಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಅಗ್ರಗಣ್ಯರಾಗಿದ್ದಾರೆ. ಶಿವರಾಮ ಕಾರಂತರು ಈ ಶತಮಾನದ ದೈತ್ಯ ಪ್ರತಿಭೆಯಾಗಿ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಪುಲವಾದ ಸಾಹಿತ್ಯವನ್ನು ನಿರ್ಮಾಣ ಮಾಡಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಈ ಸಮಾಜವನ್ನು ಸೂಕ್ಷ್ಮ ಚಿಕಿತ್ಸಕ ದೃಷ್ಟಿಯಿಂದ ನೋಡಿ ಅದರ ಸತ್ಯಗಳನ್ನು ಒಳಗಣ್ಣಿನಿಂದ ಗಮನಿಸುವ ಪ್ರಾಮಾಣಿಕತೆ, ಬದುಕಿನ ವಾಸ್ತವತೆ, ನಮ್ಮ ಪರಂಪರೆ - ಸಂಸ್ಕೃತಿಯನ್ನು ವಸ್ತುನಿಷ್ಠವಾಗಿ ಕಾರಂತರು ವಿಮರ್ಶಿಸಿದ್ದಾರೆ. ಅಷ್ಟೇ ಅಲ್ಲ; ಸಾಮಾಜಿಕ ಅಂಧ ಶ್ರದ್ಧೆ, ಕ್ರೌರ್ಯ, ಸ್ತ್ರೀ ಶೋಷಣೆಗೆ ಮಿಡಿಯುವ ಮಾನವೀಯತೆಯನ್ನು ಮೆರೆದಿದ್ದಾರೆ. ಅವರೊಬ್ಬ 'ಮಹಾಮಾನವತಾವಾದಿ'ಯೂ ಹೌದು. 'ನಡೆದಾಡುವ ವಿಶ್ವಕೋಶ 'ದಂತಿರುವ ಕಾರಂತರು ವಿಭಿನ್ನ ಸಾಹಿತ್ಯವಲಯಗಳಲ್ಲಿ ತಮ್ಮ ಛಾಪನ್ನು ಒತ್ತಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲಿಯೇ ಗಾಂಧೀಜಿಯವರ ಆದರ್ಶವಾದದ ಪ್ರೇರಣೆಗೆ ಒಳಗಾದ ಇವರದು ವಾಸ್ತವವಾದಿ ಜೀವನ ದೃಷ್ಟಿ. ಸಾಮಾಜಿಕ ಪ್ರಜ್ಞೆ, ಮಾನವೀಯತೆಯ ಅನುಕಂಪ ಅವರ ವ್ಯಕ್ತಿತ್ವದಲ್ಲಿ ಅಡಕವಾಗಿರುವುದರಿಂದಲೇ ಕವಿ ಎಂ. ಗೋಪಾಲಕೃಷ್ಣ ಅಡಿಗರು ಕಾರಂತರನ್ನು ಕುರಿತು "ಶಿವರಾಮ ಕಾರಂತರನ್ನು ನಿಮಗೆ ಪರಿಚಯ ಮಾಡಿಕೊಡುವುದೂ ಒಂದೇ, ನೇಸರನನ್ನು ಸೊಡರಿನಿಂದ ತೋರಿಸುವುದೂ ಒಂದೇ" ಎಂದು ಅಭಿಪ್ರಾಯಪಡುತ್ತಾರೆ. ಕಾರಂತರು ಹಾಗೂ ಕುವೆಂಪು ಅವರು ನವೋದಯ ಸಾಹಿತ್ಯ ಪರಂಪರೆಯ ಕಾಲಘಟ್ಟದಲ್ಲಿ 'ಮಹಾವಾಸ್ತವವಾದಿ' ಪರಿಕಲ್ಪನೆಯನ್ನು ಕನ್ನಡದಲ್ಲಿ ಹುಟ್ಟುಹಾಕಿದವರಲ್ಲಿ ಪ್ರಮುಖರಾಗಿದ್ದಾರೆ.

## ಅಧ್ಯಯನದ ಉದ್ದೇಶ

೧. ಸ್ತ್ರೀವಾದಿ ದೃಷ್ಟಿಕೋನದಿಂದ ಕಾರಂತರ ಕಾದಂಬರಿಗಳ ಅಧ್ಯಯನ ನಡೆಸುವುದು ಇಲ್ಲಿಯ ಉದ್ದೇಶವಾಗಿದೆ. ಪ್ರಮುಖವಾಗಿ ಈ ಅಧ್ಯಯನಕ್ಕೆ ಸ್ತ್ರೀವಾದಿ ದೃಷ್ಟಿಕೋನದ ವಿಮರ್ಶೆಯ ಪರಿಕರಗಳನ್ನು ಬಳಸಿಕೊಳ್ಳಲಾಗುವುದು.

೨. ಕಾರಂತರ ಕಾದಂಬರಿಗಳು ಹೆಚ್ಚಾಗಿ ಒಡಮೂಡುವುದು ನಿರ್ದಿಷ್ಟ ಪ್ರಾದೇಶಿಕ ಆವರಣದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಸ್ಥಿತ್ಯಂತರವನ್ನು ಕಾರಂತರ ಕಾದಂಬರಿಗಳಲ್ಲಿ ಕಾಣಬಹುದು. ಕಾರಂತರ ಕಾದಂಬರಿಗಳ ಮುಖಾಂತರ ಒಂದು ಪ್ರದೇಶದ ಸಾಂಸ್ಕೃತಿಕ ಸ್ಥಿತ್ಯಂತರವನ್ನು ಸ್ತ್ರೀವಾದದ ಮೂಲಕ ಅಧ್ಯಯನ ನಡೆಸುವುದು ಇಲ್ಲಿಯ ಉದ್ದೇಶವಾಗಿದೆ.

೩. ಮಾತೃಪ್ರಧಾನ ಕುಟುಂಬದ ಚಾರಿತ್ರಿಕ ಅಂಶಗಳನ್ನು ಬೆಳಕಿಗೆ ತರುವುದರಿಂದ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀತ್ವದ ಪರಿಕಲ್ಪನೆಗಳನ್ನು ಬಳಸಿಕೊಳ್ಳಲಾಗುವುದು.

೪. ಸಾಂಸ್ಕೃತಿಕ ಸ್ತ್ರೀವಾದಿ ದೃಷ್ಟಿಕೋನಗಳಿಂದ ಕಾರಂತರ ಕಾದಂಬರಿಗಳ ಪುನರ್ ಮೌಲ್ಯಮಾಪನ ಇಲ್ಲಿನ ಉದ್ದೇಶವಾಗಿದೆ.

೫. ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಗಳ ಪ್ರಾದೇಶಿಕ ಗುಣವನ್ನು ಹೊಂದಿರುವ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿ ಹಾಗೂ ಪ್ರಾದೇಶಿಕ ಇತಿಹಾಸದ ಅನೇಕ ಅಂಶಗಳಿವೆ. ವಾಸ್ತವ 'ಲಿಖಿತ ಚರಿತ್ರೆ'ಯಲ್ಲಿನ ಅಂಶಗಳು ಹಾಗೂ ಕಾದಂಬರಿಯ ಚೌಕಟ್ಟಿನಲ್ಲಿ ಬಂದಿರುವ ಈ ರೀತಿಯ ಅಂಶಗಳನ್ನು ಗುರುತಿಸುವುದರ ಮೂಲಕ ಸೃಜನಶೀಲ ಕೃತಿಗಳ ಮತ್ತೊಂದು ರೀತಿಯ ಅಧ್ಯಯನವನ್ನು ಕಂಡುಕೊಳ್ಳುವ ಸಾಧ್ಯತೆಗಳಿವೆ.

೬. ಪ್ರಾದೇಶಿಕ ಕಲಾ ಪ್ರಪಂಚವು ಇವರ ಕಾದಂಬರಿಗಳಲ್ಲಿ ಬರುವುದರಿಂದ, ಕಲೆ - ಸಾಹಿತ್ಯ ಮಾದರಿಯ ಅಂಶಗಳನ್ನು ಇಲ್ಲಿ ಅಧ್ಯಯನ ನಡೆಸಲಾಗುವುದು.

೭. ಕಾರಂತರ ಕಾದಂಬರಿಗಳಲ್ಲಿ ರೂಪುಗೊಂಡಿರುವ ಸ್ತ್ರೀತ್ವದ ನೆಲೆಯನ್ನು ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಪರಿಕಲ್ಪನೆಗಳ ಮೂಲಕ ಪರಿಶೋಧಿಸುವುದರ ಮುಖಾಂತರ ಹೊಸ ರೀತಿಯ ಮಂಡನೆಯು ಸಾಧ್ಯ.

೮. ಕಾರಂತರ ಕಾದಂಬರಿಗಳಲ್ಲಿ ಸ್ತ್ರೀತ್ವದ ಪ್ರತೀಕವು ಗಂಡು ಮತ್ತು ಹೆಣ್ಣು ಎನ್ನುವ ಕೇವಲ ದೈಹಿಕ ವ್ಯತ್ಯಾಸಗಳಿಂದ ರೂಪುಗೊಂಡಿಲ್ಲ, ಈ ದೃಷ್ಟಿಯಿಂದ ಕಾರಂತರ ಕಾದಂಬರಿಗಳಲ್ಲಿ ಬರುವ ಸ್ತ್ರೀ ದೇವತೆಗಳ ಆರಾಧನೆಗಳಾಗಲೀ, ನಿರೂಪಣೆಯಲ್ಲಿನ (ಮೈಮನಗಳ ಸುಳಿಯಲ್ಲಿ) ಸರಳ ದ್ವಂದ್ವಗಳಾಗಲೀ ಮುಖ್ಯವಾಗಿಲ್ಲ. ಕೆಲವು ಸಂದರ್ಭದಲ್ಲಿ ಕಾರಂತರು ಈ ತರಹದ ಸರಳ ದ್ವಂದ್ವಗಳನ್ನು ಮೀರಿ ನಡೆಯುತ್ತಾರೆ ಮತ್ತು ಸ್ತ್ರೀತ್ವವನ್ನು ಪ್ರತಿಮಾತ್ಮಕ ಕೇಂದ್ರಗಳ ಮೂಲಕ ಸಂಯೋಜಿಸುತ್ತಾರೆ. ಇದು ಕನ್ನಡ ಅಧ್ಯಯನದ ಕ್ಷೇತ್ರದಲ್ಲಿ ಕುತೂಹಲದಾಯಕ ಸಂಗತಿಯಾಗಿದೆ.

ಭಾರತದಲ್ಲಿ ರಾಷ್ಟ್ರೀಯತೆ ಮತ್ತು ಸಾಮ್ರಾಜ್ಯಶಾಹಿ - ಇವುಗಳ ಬಗ್ಗೆ ನಿರ್ದಿಷ್ಟವಾಗಿ ಗ್ರಹಿಸಿದವರು ಕಾರಂತರು ಎಂಬುದು ಅತ್ಯಂತ ಗಮನಾರ್ಹವಾದ ಸಂಗತಿ. ಅವರ ಸಾಹಿತ್ಯ ಸೃಷ್ಟಿಗೆ ರಾಷ್ಟ್ರೀಯ ಚಳುವಳಿ, ಸ್ವಾತಂತ್ರ್ಯ, ಸಮಾನತೆ, ಗಾಂಧಿವಾದದ ಪ್ರೇರಣೆ ವಿಪುಲವಾಗಿ ಗಾಢ ಪರಿಣಾಮವನ್ನು ಬೀರಿವೆ. ಸಾಮಾಜಿಕ ವ್ಯವಸ್ಥೆಯನ್ನು ಪರಿವರ್ತಿಸಬೇಕಾದ ಅನಿವಾರ್ಯತೆಯ ಜೊತೆಗೆ ಭಾರತೀಯ ಸಮಾಜ ಮತ್ತು ಕುಟುಂಬಗಳಲ್ಲಿಯ ಆಂತರಿಕ ಪ್ರಕ್ರಿಯೆಯನ್ನು ಅವರು ಗಮನಿಸುತ್ತಾರೆ. ಸದಾ ಸತ್ಯಗಳೊಂದಿಗೆ ಸಂಘರ್ಷವನ್ನು ಮಾಡುವುದರಿಂದ ಇವರನ್ನು ಉದಾರ ಮಾನವತಾವಾದ (Liberal Humanism)ದ ಪ್ರವರ್ತಕರೆನ್ನಬಹುದು. ಅಂದರೆ ಕುವೆಂಪು ಅವರು ಸಾಮಾಜಿಕ ಸುಧಾರಣಾವಾದಿಯಾಗಿ ಕಂಡರೆ, ಕಾರಂತರು ಉದಾರಮಾನವತಾವಾದಿಯಾಗಿ ಕಂಡುಬರುತ್ತಾರೆ.

ಸಾಮಾಜಿಕ ವ್ಯವಸ್ಥೆಯ ಸ್ಥಿತ್ಯಂತರದಲ್ಲಿ ಕೌಟುಂಬಿಕ ಮೌಲ್ಯಗಳು ಕುಸಿಯುತ್ತಿರುವ ಸಂದರ್ಭದಲ್ಲಿ ಕಾರಂತರು ಸಾಮಾಜಿಕ ಬದ್ಧತೆ, ಮೌಲ್ಯಗಳ ಹುಡುಕಾಟದಲ್ಲಿಯೇ ಬರೆಯುವ ಹೊತ್ತಿಗೆ ಕೌಟುಂಬಿಕ ಮೌಲ್ಯಗಳು ಸ್ಥಿತ್ಯಂತರ ಹೊಂದುತ್ತವೆ. ಅವಿಭಕ್ತ ಕುಟುಂಬ ಪದ್ಧತಿ ಸಿಡಿದು ಮಾತೃಪ್ರಧಾನ ಕುಟುಂಬ ಪದ್ಧತಿ, ಪಿತೃಪ್ರಧಾನ ಕುಟುಂಬ ಪದ್ಧತಿಗಳು ತಮ್ಮ ಬೇರುಗಳನ್ನು ಬಲವಾಗಿ ತಳವೂರಿದಾಗ ಉಂಟಾಗುವ ಕೌಟುಂಬಿಕ ಪರಿವರ್ತನೆಗಳು ಕಾರಂತರಿಗೆ ಸಾಕಷ್ಟು ತುಡಿತವನ್ನು ತಂದೊಡ್ಡುತ್ತವೆ. ಡಾ. ಡಿ.ಆರ್. ನಾಗರಾಜ್ ಅವರು ಗುರುತಿಸುವಂತೆ "ಕಾರಂತ ಪ್ರತಿಭೆ ಮೂಲತಃ ಸಾಮಾಜಿಕವಾದದ್ದು. ಅಂದರೆ, ಮನುಷ್ಯನ ಸಾಮಾಜಿಕ ವ್ಯಕ್ತಿತ್ವವೇ ಅವರಿಗೆ ಪ್ರಧಾನ. ಇದನ್ನೇ Enlightenist severity ಎಂದು ಕರೆಯಬಹುದು" (ಡಿ.ಆರ್. ನಾಗರಾಜ, ಜಿ.ಎಸ್. ಶಿವರುದ್ರಪ್ಪ (ಸಂ.), ೧೯೪೩, ಪು. ೧೪) ಎಂಬಂತೆ ಕಾರಂತರು ಕೌಟುಂಬಿಕ ಪರಿಧಿಯಲ್ಲಿ ಗಂಡು ಹೆಣ್ಣಿನ ಆರೋಗ್ಯಕರ ಸಂಬಂಧ ವ್ಯವಸ್ಥೆಯ ಅಸ್ತಿತ್ವವನ್ನು ಗುರುತಿಸುತ್ತಾರೆ.

ಸಾಮಾಜಿಕ ಸಂಕರದಲ್ಲಿ ವ್ಯಕ್ತಿ ಮುಖ್ಯವಾಗುತ್ತಾನೆ. ವ್ಯಕ್ತಿಯ ವೈಯಕ್ತಿಕ ಹಿತಾಸಕ್ತಿಗಳು ಸ್ವಕೇಂದ್ರಿತವಲ್ಲ; ಸಮಾಜ ಕೇಂದ್ರಿತವಾಗಿರುತ್ತವೆ. ವ್ಯಕ್ತಿಗೆ ಸಾಮಾಜಿಕ 'ಚಹರೆ'ಗಳು ಮುಖ್ಯವಾಗುತ್ತವೆ. ಸ್ತ್ರೀ ವ್ಯಕ್ತಿಗತ ಪರಿಸರದಲ್ಲಿ ಕುಟುಂಬದ ಎಲ್ಲಾ ಬಗೆಯ ಸಂಘರ್ಷಗಳಿಗೆ ಬದ್ಧಳಾಗುವುದರ ಮೂಲಕ ಕೌಟುಂಬಿಕ ಹೊಣೆಗಾರಿಕೆಯನ್ನು ಪಡೆದಿರುತ್ತಾಳೆ. ಪುರುಷಪ್ರಧಾನ ಕುಟುಂಬ ಪದ್ಧತಿಯಲ್ಲಿ ಗೈರು ಹಾಜರಿಯಾದ ಸ್ತ್ರೀಯ ಅಸ್ಮಿತೆಯನ್ನು ಕಾರಂತರ

ಕಾದಂಬರಿಗಳ ಮುಖಾಂತರ ಕಂಡುಕೊಳ್ಳಬಹುದು. ನಿಸರ್ಗ ಹಾಗೂ ಮಾನವ ಸಂಬಂಧ ತೀರ ಹತ್ತಿರವಾದರೂ ನಿಸರ್ಗವನ್ನು ಆಳುವ ಶಕ್ತಿ ಮನುಷ್ಯನಲ್ಲ ಎಂಬ ವಿಚಾರ ಸರಣಿ ಕಾರಂತರದು. ಹೆಣ್ಣು ನಿಸರ್ಗದ ಪೂರಕ ಅಂಶ ಎಂಬ ನಿಲುವು ಅವರದಾದರೂ ನಿಸರ್ಗವೇ ಹೆಣ್ಣು ಎಂಬ ಭಾವನಾತ್ಮಕ ವೈಭವೀಕರಣಕ್ಕೆ ಯಾವುದೇ ಅವಕಾಶವಿಲ್ಲ. ಸ್ತ್ರೀವಾದಿಗಳು ಪ್ರತಿಪಾದಿಸುವ ಸ್ತ್ರೀಗುಣವನ್ನು ಪ್ರಕೃತಿಯೊಂದಿಗೆ ಹೋಲಿಸಿ; ಅದನ್ನು ಸಹಜವೆಂಬಂತೆ ಬಿಂಬಿಸುವುದನ್ನು ಕಾರಂತರೂ ಸಹ ಒಪ್ಪುವುದಿಲ್ಲ. ಆದರೆ "ನಿಸರ್ಗ ಸಹಜತೆಯ ಕುಟುಂಬ ಮಾನ್ಯತೆಯನ್ನು ಹೆಣ್ಣು ಪಡೆಯಬೇಕೆಂಬ ದೃಷ್ಟಿ, ಧೋರಣೆಯಲ್ಲಿ ಕಾರಂತರು ಸ್ತ್ರೀವಾದಿ ಚಿಂತನೆಗೆ ವಿಶಿಷ್ಟ ಕಾಣಿಕೆಯನ್ನು ನೀಡುತ್ತಾರೆ" (ಶುಭಾದಾಸ್, ೨೦೦೩, ಪು. ೨). ಈ ದೃಷ್ಟಿಯಲ್ಲಿ ಕಾರಂತರ ಸ್ತ್ರೀ ಪಾತ್ರಗಳ ಪ್ರಧಾನ ಭೂಮಿಕೆಯನ್ನು ಕುಟುಂಬ ಕೇಂದ್ರಿತ ಸ್ತ್ರೀತ್ವದ ಪ್ರತೀಕಗಳು, ಸಮಾಜಕೇಂದ್ರಿತ ಸ್ತ್ರೀತ್ವದ ಪ್ರತೀಕಗಳು ಹಾಗೂ ಕಲೆ ಸಾಹಿತ್ಯ ಕೇಂದ್ರಿತ ಪ್ರತೀಕಗಳೆಂದು ಸ್ಥೂಲವಾಗಿ ಗುರುತಿಸಬಹುದು. ಕಾರಂತರು ಯಾವುದೇ 'ವಾದ' ಗಳಿಗಾಗಲೀ, ತತ್ತ್ವಸಿದ್ಧಾಂತಗಳಿಗಾಗಲೀ ಬದ್ಧರಾಗಿ ಸಾಹಿತ್ಯ ಕೃಷಿಯನ್ನು ಕೈಗೊಂಡವರಲ್ಲ. ಸಾಮಾಜಿಕ, ಹೊಣೆಯನ್ನರಿತ ಪ್ರಜ್ಞಾವಂತ ನಾಗರಿಕನಾಗಿ ಅವರು ಬರೆಯುತ್ತಾರೆ. ಸಾಮಾಜಿಕ ಪರಿಸರವನ್ನು ವಸ್ತುನಿಷ್ಠವಾಗಿ, ವಾಸ್ತವಿಕ ದೃಷ್ಟಿಕೋನವನ್ನೇ ಕೇಂದ್ರವಾಗಿಟ್ಟುಕೊಂಡು ನೋಡುವ ರೀತಿ ಅವರದು. ಮಾನವತಾವಾದಿ ಯಾರೋ ಅವರೇ ಸ್ತ್ರೀವಾದಿಯಾಗಿರುತ್ತಾರೆ ಎಂಬುದು ಸ್ತ್ರೀವಾದಿ ನಿಲುವಿನ ಮುಖ್ಯವಾದ ಅಂಶ. ಈ ನಿಟ್ಟಿನಲ್ಲಿ ಕಾರಂತರೂ ಕೂಡ ಸ್ತ್ರೀವಾದಿಯೆ.

ಶಿವರಾಮ ಕಾರಂತರ ಕಾದಂಬರಿ ಪ್ರಪಂಚ ಪ್ರಧಾನವಾಗಿ ಸ್ತ್ರೀಕೇಂದ್ರಿತ ವಸ್ತುವನ್ನೊಳಗೊಂಡೇ ರಚಿತವಾಗಿದೆ. ಇದಕ್ಕೆ ಅವರು ಬಾಲ್ಯದಿಂದಲೂ ಕಂಡ ಸ್ತ್ರೀ ಅನುಭವ ಜಗತ್ತಿನ ಅಂಶಗಳು ಕಾರಣವಾಗಿವೆ. ಹಾಗಾಗಿ ಸ್ತ್ರೀವಾದಿ ನಿಲುವಿನ ಕಾರಂತರು ಎಲ್ಲಿ ಜೀವ ವಿರೋಧಿ ಮೌಲ್ಯಗಳ ಪರಂಪರೆ ಮುಂದುವರೆಯುತ್ತದೋ ಅದನ್ನು ನಿರ್ಭಿಡೆಯಿಂದಲೇ ಖಂಡಿಸಿದ್ದಾರೆ. ಸ್ತ್ರೀವಾದಿಗಳು ವಿರೋಧಿಸುವ 'ಸ್ತ್ರೀ - ಪುರುಷ ಅಸಮಾನತೆ' ಹಾಗೂ 'ಲೈಂಗಿಕ ಭಿನ್ನತೆ' (Gender Difference)ಗಳನ್ನು ಕಾರಂತರು ಸುತಾರಾಂ ಒಪ್ಪುವುದಿಲ್ಲ. ಹೆಣ್ಣನ್ನು 'ಅಬಲೆ', 'ಕೋಮಲೆ' ಎಂಬ ಇತ್ಯಾದಿ ರೂಢಿಗತ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ವಿರೋಧಿಸುತ್ತಾರೆ. ಹಿಂದೂ ಸಮಾಜದಲ್ಲಿಯ ಸ್ತ್ರೀಗೆ ಸಂಬಂಧಪಟ್ಟ ಅನಿಷ್ಟ ಪದ್ಧತಿಗಳಾದ ವಿಧವಾಪದ್ಧತಿ, ಸತೀಸಹಗಮನ, ಕೇಶಮುಂಡನ, ವೇಶ್ಯಾಪದ್ಧತಿ ಮುಂತಾದ ಅಮಾನವೀಯ ಆಚರಣೆಗಳನ್ನು ಬಯಲುಗೊಳಿಸಿ ಈ ಸಮಾಜವನ್ನು ಸ್ವಾಸ್ಥ್ಯ

ಸಮಾಜವನ್ನಾಗಿ ಮಾಡುವ ಉದ್ದೇಶ ಅನಿವಾರ್ಯವಾಗಿತ್ತು. ಸ್ತ್ರೀಯನ್ನು ಬಂಜೆ, 'ಅಮಂಗಳೆ', ಜಾತಿ ಭ್ರಷ್ಟೆ ಎಂಬಿತ್ಯಾದಿ ಅವಮಾನಕರವಾದ ಸ್ಥಿತಿಯಲ್ಲಿ ಅವಳನ್ನು ಕಾಣಲಾಗುತ್ತಿತ್ತು. ಇಂತಹ ಮೌಢ್ಯ, ಅಮಾನವೀಯ ಸಂಪ್ರದಾಯವನ್ನು ಕಾರಂತರು ವಿರೋಧಿಸುವುದರ ಮೂಲಕ ತಮ್ಮ ಕಾದಂಬರಿಗಳಲ್ಲಿ ವ್ಯಂಗ್ಯ ಮತ್ತು ಗಂಭೀರ ಆಲೋಚನೆಗೆ ಹಚ್ಚುತ್ತಾರೆ. ಇದರಿಂದ ಸಮಾಜದ ಕಣ್ಣು ತೆರೆಸುವ ಪ್ರಾಮಾಣಿಕ ಪ್ರಯತ್ನ ಅವರದು. ಹಾಗೆಯೇ ಪೌರಾಣಿಕ ಸ್ತ್ರೀತ್ವದ ಮಾದರಿಗಳನ್ನು ಆಧುನಿಕ ಸಾಮಾಜಿಕ ಸಂದರ್ಭಕ್ಕೆ ಅನ್ವಯಿಸಿ ನೋಡಿ ಅವುಗಳನ್ನು ಪುರಾಣ ಭಂಜನೆ (Dy-Mythification)ಯ ಪ್ರಕ್ರಿಯೆಗೆ ಒಳಪಡಿಸುತ್ತಾರೆ.

ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ನಡೆಯುವ ಲಿಂಗರಾಜಕಾರಣ (Gender Politics)ವು ಮಹಿಳೆ ಪುರುಷ ನಿರ್ಮಿಸಿದ ಸಂಸ್ಕೃತಿಯ ಪ್ರತಿನಿಧಿಯಾಗಿ, ಅದರ ರಕ್ಷಕಿಯಾಗಿ, ಪೋಷಕಿ ಹಾಗೂ ವಾಹಕಿಯಾಗಿ ಪರಿಗಣಿತವಾಗಿದ್ದಾಳೆ. ಜೊತೆಗೆ ಇಂಥ ಸಿದ್ಧ ಮಾದರಿಯ ಪಾತ್ರಗಳನ್ನು ಪರಿಪಾಲಿಸುವ ಸಾಧನವಾಗಿದ್ದಾಳೆ. ಹೀಗೆ ಸ್ತ್ರೀ ಪುರುಷ ಸಂಸ್ಕೃತಿಯ ಪ್ರತಿಪಾದಕಿಯಾಗಿರುವುದರಿಂದಲೇ ತನ್ನ ಅಸ್ಮಿತೆಯನ್ನು ಮರೆತಿದ್ದಾಳೆ. ಈ ಬಗೆಯ ಸ್ತ್ರೀಯ ಸ್ತ್ರೀತ್ವದ ಗೈರು ಹಾಜರಿಯನ್ನು ಮತ್ತೆ ಕಂಡುಕೊಳ್ಳಬೇಕಾದ ಪ್ರಯತ್ನ ಕಾರಂತರ ಸಾಹಿತ್ಯ ಕೃತಿಗಳ ಮೂಲಕ ಸಾಧ್ಯ. ಆದ್ದರಿಂದ ಮಹಿಳೆ ಕೌಟುಂಬಿಕ ಪಾತ್ರನಿರ್ವಹಣೆಯ ಸೀಮಿತ ಚೌಕಟ್ಟನ್ನು ನಿರ್ಮಿಸಿ ; ಪುರುಷನಿಗೆ ಈ ಹೊಣೆಗಾರಿಕೆಯಿಂದ ವಿನಾಯಿತಿ ಕೊಡಲಾಗಿದೆ. ಆದರೆ ಅಂಥ ಹೊಣೆಗೇಡಿತನವನ್ನು ಕಾರಂತರು ಅಲ್ಲಗಳೆಯುತ್ತಾರೆ. ಪುರುಷರ 'ಪಲಾಯನವಾದಿ' ತನದ ವ್ಯಂಗ್ಯ ಧೋರಣೆ ಅವರ ಕಾದಂಬರಿಗಳಲ್ಲಿ ಕಂಡುಬರುತ್ತದೆ. 'ಮರಳಿ ಮಣ್ಣಿಗೆ'ಯ ಲಚ್ಚ, 'ಕರುಳಿನ ಕರೆ'ಯ ಲಕ್ಷ್ಮಣ, 'ಇನ್ನೊಂದೇ ದಾರಿ'ಯ ಆನಂದ ಇತ್ಯಾದಿ ಪಾತ್ರಗಳು ತಮ್ಮ ಬೇಜವಾಬ್ದಾರಿ ಧೋರಣೆಯಿಂದ ಇಡೀ ಸಂಸಾರದ ಜೀವನವನ್ನು ನರಕ ಮಾಡುತ್ತಾರೆ. ಇಂತಹ ಕಠಿಣ ಪರಿಸ್ಥಿತಿಯನ್ನು ಅಲ್ಲಿನ ಸ್ತ್ರೀಯರು ಬಹಳ ಜಾಣ್ಮೆಯಿಂದ, ಪ್ರತಿಭೆಯಿಂದ ನಿಭಾಯಿಸುವ ಪ್ರಕ್ರಿಯೆ ಬಹುಮುಖ್ಯವಾದ ಸಂಗತಿಯಾಗುತ್ತದೆ.

ಸುನೀತಾ ಶೆಟ್ಟಿಯವರು ಗುರುತಿಸಿರುವಂತೆ, "ಕಾರಂತರ ಹೆಣ್ಣು ಪಾತ್ರಗಳು ಒಂದು ಸಮಷ್ಟಿಯ ನೆಲೆಯಲ್ಲಿ ಅರಳುವ, ಮಹತ್ವದ ಅಷ್ಟೇ ಸ್ವಾಭಾವಿಕವಾದ ಅಭೇದ್ಯ ಶಕ್ತಿಗಳಾಗಿ, ಜೀವನದ ಪರಿಪೂರ್ಣತೆಯಲ್ಲಿ ಉಸಿರಾಡಲು ಶಕ್ಯವೆನಿಸುವ ಗತಿಬಿಂಬಗಳಾಗಿ ಕಣ್ಮುಂದೆ ನಿಲ್ಲುತ್ತವೆ. ಅತಿ ಭಾವುಕತೆ, ಕಲ್ಪಕತೆ - ಇವು ಅಸ್ತಿತ್ವದ ಬೇರನ್ನು

ಅಲುಗಾಡಿಸಿ ಬಿಡಬಹುದೆನ್ನುವ ಎಚ್ಚರದಿಂದ ರೂಪುಗೊಂಡ ಕಾರಂತರ ಪಾತ್ರಗಳು ... ಬದುಕನ್ನು ನೆಚ್ಚಿ ಬಾಳುವ ಹಟತೊಟ್ಟವರೇ, ಅಲ್ಲೊಂದು ಗಂಡು - ಇಲ್ಲೊಂದು ಹೆಣ್ಣು; ಒಪ್ಪಿ ಬಾಳಿದರೆ ಅದೇ ಬದುಕು; ಇಲ್ಲದಿರೆ ಒಡಕು" (ಸುನೀತಾ ಎಂ. ಶೆಟ್ಟಿ, ೨೦೦೦, ಪು. ೩೧) ಎಂಬ ನಿರ್ದುಷ್ಟ ಧೋರಣೆಯನ್ನು ಹೊಂದಿದವರಾಗಿದ್ದಾರೆ.

ಗ್ರಾಮೀಣ ಪರಿಸರದ ಅದರಲ್ಲೂ ದಕ್ಷಿಣ ಕನ್ನಡದ ಪ್ರಾದೇಶಿಕ ಆವರಣದಲ್ಲಿ ಅನಾವರಣಗೊಳ್ಳುವ ಕಾರಂತರ ಕಾದಂಬರಿಗಳು ಅಲ್ಲಿಯ ದಟ್ಟವಾದ ಪರಿಸರ ಹಾಗೂ ಜನಜೀವನದ ರೀತಿ-ನೀತಿಗಳನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ ಆಧುನಿಕ ಸಾಂಸ್ಕೃತಿಕ ಪರಿಸರದಿಂದ ಹೊರಗೆ ಕೆಲವೇ ಕೆಲವು ಕಾದಂಬರಿಗಳನ್ನು ಗಮನಿಸಬಹುದು. ಗ್ರಾಮೀಣ ಪರಿಸರದ ಬ್ರಾಹ್ಮಣ ವಿಧವೆಯರ ಶೋಷಿತ ಬದುಕಿನ ಆವರಣ, ಅದೇ ಪರಿಸರದ ವೇಶ್ಯೆಯರ ಬದುಕು, ಪರಿತ್ಯಕ್ತೆಯರು, ವಿಶ್ವಸ್ತೆಯರು, ದಲಿತ ಸ್ತ್ರೀಯರು, ಬುಡಕಟ್ಟು ಜನರ ಸಾಂಸ್ಕೃತಿಕ ಆವರಣ ತೆರೆದುಕೊಳ್ಳುತ್ತದೆ. ಕಾರಂತರು ವೇಶ್ಯೆಯರನ್ನು ಕೌಟುಂಬಿಕ ಚೌಕಟ್ಟಿನ ಹೊರಗಿನಿಂದ ನೋಡುವುದಿಲ್ಲ. ವೇಶ್ಯೆಯರೂ ಕೂಡಾ ಪಾತಿವ್ರತ್ಯದ ಸಾತತ್ಯವನ್ನು ಹೊಂದಿ, ಅವರ ನೋವು ನಲಿವುಗಳಿಗೆ ಸ್ಪಂದಿಸಿ, ಮಾನವೀಯ ಮೌಲ್ಯಗಳಿಗೆ ಹಾತೊರೆಯುತ್ತಾರೆ. ಗರತಿಯಾಗಿರಲಿ, ವೇಶ್ಯೆಯಾಗಿರಲಿ, ಒಬ್ಬ ಪುರುಷನಿಗಾಗಿ ಸಂಘರ್ಷಿಸುವ ಪ್ರಮೇಯವೇ ಇಲ್ಲಿ ಉದ್ಭವಿಸುವುದಿಲ್ಲ. 'ಮೈಮನಗಳ ಸುಳಿಯಲ್ಲಿ'ಯ ಭವಾನಿ, ಮಂಜುಳೆ, 'ಧರ್ಮರಾಯನ ಸಂಸಾರ', 'ಬತ್ತದ ತೊರೆ'ಯ ವಿನುತೆ ಹಾಗೂ ಚಂದ್ರಿ ತನಗೆ ವೇಶ್ಯಾವೃತ್ತಿಯನ್ನು ಧಿಕ್ಕರಿಸಿ ಹೊಸ ಜೀವನದ ಹಂಬಲದ ಆಶಯಗಳನ್ನು ಕಾಣುವುದು, 'ಉಕ್ಕಿದ ನೊರೆ'ಯ ಚೆನ್ನಕ್ಕನ ಜನೋಪಕಾರಿ ಕೆಲಸ, ಗುಲಾಬಿಯು ತನ್ನ ಮಗಳನ್ನು ಮದುವೆ ಮಾಡಿ ವೃತ್ತಿಗೆ ತಿಲಾಂಜಲಿಯನ್ನೀಯುವುದು, 'ಕನ್ಯಾಬಲಿ'ಯ ಮಾಲತಿಯಂತೂ ಇಡೀ ಸಾಮಾಜಿಕ ವ್ಯವಸ್ಥೆಯನ್ನೇ ವಿರೋಧಿಸುತ್ತಾಳೆ. 'ಜಾರುವ ದಾರಿಯಲ್ಲಿ'ಯ ಗುಲಾಬಿ ತನ್ನ ಕೆಟ್ಟದಾರಿಯನ್ನು ಬಿಟ್ಟು ಸಮಾಜ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವ ಸಂಗತಿ - ಇತ್ಯಾದಿ ಅಂಶಗಳು ವೇಶ್ಯೆಯರ ಬಗ್ಗೆ ಇರುವ ಸಾಮಾಜಿಕ ಅನಾದರವನ್ನು ಖಂಡಿಸುವ ಕಾರಂತರು ಅವರಲ್ಲಿ ಜೀವಪರ ಮೌಲ್ಯಗಳನ್ನು ದಾಖಲಿಸುತ್ತಾರೆ.

ಹೆಣ್ಣನ್ನು ಹೆಣ್ಣಾಗಿ ನೋಡುವ ವಸ್ತುನಿಷ್ಠತೆ, ಸ್ತ್ರೀಸಂವೇದನೆಯ ಅಂತಃಕರಣ ಕಾರಂತರಲ್ಲಿ ಮೂಲ ಸೆಲೆಯಾಗಿಯೇ ಹರಿದಿದೆ. ಸ್ತ್ರೀವಾದದ ಹೊಸ ಹೊಳಹುಗಳಿಗೆ ಅವರ ಕಾದಂಬರಿಗಳು ವಿಶಿಷ್ಟ ಕೊಡುಗೆಯ ರೂಪಗಳಾಗಿ ಕಂಡುಬರುತ್ತವೆ. ಸ್ವಾತಂತ್ರ್ಯಯುಗದ ಸಾಮಾಜಿಕ ಸುಧಾರಣೆಯ ಪರಿಕಲ್ಪನೆಗಳು ಅವರಿಗೆ ಪ್ರೇರಣೆಯ

ಕೇಂದ್ರ ಬಿಂದುಗಳಾದವು. ಅದರಿಂದಾಗಿಯೇ ಈ ಗುಂಪಿನಿಂದ ಬೇರೆಯಾದ ಕಾರಂತರು ಸಾಮಾಜಿಕ - ಸಾಂಸ್ಕೃತಿಕ ಪರಿಸರವನ್ನು ಗುರುತಿಸಿಕೊಂಡು ಬರೆಯತೊಡಗುತ್ತಾರೆ.

ಇಂತಹ ಸಂದರ್ಭದಲ್ಲಿ ಕಾರಂತರಿಗೆ ಗಂಡು - ಹೆಣ್ಣುಗಳು ತೀರ ಹತ್ತಿರವಾದರು. ವಾಸ್ತವಿಕ ಜಗತ್ತಿನಲ್ಲಿ ಮನುಷ್ಯ ಮನುಷ್ಯನ ನಡುವಿನ ಮಾನವೀಯ ಸಂಬಂಧ ಮೌಲಿಕವಾಗಿ ಕುಸಿಯುತ್ತಿರುವ ಕೌಟುಂಬಿಕ ಪದ್ಧತಿಗಳು - ಇವುಗಳ ನಡುವೆ ಒಂದು ಆರೋಗ್ಯಕರ ಸಂಬಂಧವನ್ನೇರ್ಪಡಿಸುವುದು ಅನಿವಾರ್ಯವಾಗಿತ್ತು. ಅದರಲ್ಲೂ ಗಂಡು ಹೆಣ್ಣಿನ ಸಂಬಂಧಗಳ ಹಿಂದಿರುವ ಅಪಾರದರ್ಶಕ ಪ್ರಪಂಚವನ್ನು ಬಯಲುಗೊಳಿಸುವ ಮಹತ್ವದ ವಿಚಾರಗಳು ಅವರ ಸಾಹಿತ್ಯ ಪ್ರೇರಕ ಶಕ್ತಿಗಳಾಗಿ ಬರುತ್ತವೆ. ರಾಷ್ಟ್ರೀಯವಾದಿ ಚಳುವಳಿಯ ಧಾರೆಯಲ್ಲಿ ಸುಧಾರಣವಾದದ ಹಿನ್ನೆಲೆಯಲ್ಲಿ ಕಾದಂಬರಿಗಳನ್ನು ಬರೆದ ಕುವೆಂಪು, ಆನಂದಕಂದ, ಗೊರೂರು, ಅ.ನ.ಕೃ., ಬಸವರಾಜ ಕಟ್ಟೀಮನಿ, ತ.ರಾ.ಸು. ಮುಂತಾದವರು ಸೇರುತ್ತಾರೆ. ಆದರೆ ಇವರೆಲ್ಲರಿಗಿಂತ ಭಿನ್ನವಾಗಿ ಕಾರಂತರು ಕಾದಂಬರಿ ಪ್ರಪಂಚವನ್ನು ವಿಸ್ತರಿಸುತ್ತಾರೆ.

'ಲೈಂಗಿಕ ಪಾವಿತ್ರ್ಯ'ವನ್ನು ಏಕಪಕ್ಷೀಯವಾಗಿ ನಿರ್ಧರಿಸುವ ಸಮಾಜ 'ಸ್ತ್ರೀಲೈಂಗಿಕತೆ (Female Sexuality)ಯನ್ನು ಕಡೆಗಣಿಸಿ ಕಂಡಿರುವುದು ಹೆಣ್ಣಿನ ಹೆಚ್ಚಿನ ಸಮಸ್ಯೆಗಳಿಗೆ ಕಾರಣವಾಗಿದೆ. ಸ್ತ್ರೀವಾದಿ ನಿಲುವು ಇದನ್ನೇ ಕೇಂದ್ರೀಕರಿಸುತ್ತದೆ. ಪುರುಷಪ್ರಧಾನತೆ ಸ್ತ್ರೀಯ ಲೈಂಗಿಕ ನಿರ್ಬಂಧದಿಂದಲೇ ಅವಳು ವೈಧವ್ಯ, ಪಾತಿವ್ರತ್ಯ ಎಂಬ ದ್ವಂದ್ವಗಳ ಸಂಕೀರ್ಣತೆಯಲ್ಲಿ ಸಿಲುಕಿಕೊಂಡಿದ್ದಾಳೆ. ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳಂತಹ ಹಿಂಸಾತ್ಮಕ ಪ್ರವೃತ್ತಿಗಳಿಂದ ಹೆಣ್ಣಿಗೆ ಮಾನ - ಮರ್ಯಾದೆಯ ಬೇಲಿಯನ್ನು ಹಾಕಿದೆ. ಲೈಂಗಿಕ ಪಾವಿತ್ರ್ಯವನ್ನು ಕೇವಲ ಹೆಣ್ಣಿಗೆ ಮಾತ್ರ ಸೀಮಿತಗೊಳಿಸಿ, ಗಂಡಿಗೆ ಅದರ ಬಗ್ಗೆ ಯಾವ ನಿರ್ಬಂಧವನ್ನೂ ಹೇರದೆ ಅಸಮಾನತೆಯನ್ನು ಪ್ರತಿಪಾದಿಸಲಾಗುತ್ತಿದೆ. ಸ್ತ್ರೀವಾದ ಇಂತಹ ಸಾಮಾಜಿಕ ತಾರತಮ್ಯವನ್ನು ವಿರೋಧಿಸುತ್ತದೆ. ಕಾರಂತರು ಇಂತಹ ಸಾಂಪ್ರದಾಯಿಕ ಧೋರಣೆಯನ್ನು ಮೀರುತ್ತಾರೆ. ಲೈಂಗಿಕ ವಿಷಯಕ್ಕೆ ಬಂದಾಗ ಹೆಣ್ಣು ಅಬಲೆಯಾಗುತ್ತಾಳೆ. ನೈತಿಕ ಪ್ರಶ್ನೆ ಬಂದಾಗ ಸ್ತ್ರೀ ಶೀಲ - ಅಶ್ಲೀಲ, ಪವಿತ್ರ - ಅಪವಿತ್ರ ; ಶುದ್ಧ - ಅಶುದ್ಧ, ಮಂಗಳ - ಅಮಂಗಳವೆಂಬ ನೀತಿ ಧೋರಣೆಗಳನ್ನು ಎದುರಿಸಬೇಕಾಗುತ್ತದೆ. 'ನಂಬಿದವರ ನಾಕ ನರಕ'ದ ಸತ್ಯಭಾಮೆಗೆ ಹಾದರದ ಅಪವಾದ ಹೊರಿಸುವುದು, ಲೈಂಗಿಕ ಅಪವಾದಕ್ಕೊಳಗಾಗುವುದು. 'ಧರ್ಮರಾಯನ ಸಂಸಾರ'ದ ಸರಸ್ವತಿ ಇವರೆಲ್ಲಾ

ಪ್ರತಿಭಟನಾತ್ಮಕ ಹಿನ್ನೆಲೆಯಲ್ಲಿ ತಮ್ಮ ಅಸ್ತಿತ್ವವನ್ನು ಹುಡುಕುತ್ತಾರೆ. ಆದರೆ 'ಮರಳಿ ಮಣ್ಣಿಗೆ ' ಯಂಥ ಎಷ್ಟೋ ಗಂಡಸರು ವಿವಾಹೇತರ ಸಂಬಂಧವಿಟ್ಟುಕೊಳ್ಳುವುದನ್ನು ಕಾರಂತರು ಅದರ ದುಷ್ಪರಿಣಾಮಗಳನ್ನು ಎಚ್ಚರಿಕೆಯಿಂದ ವಿವರಿಸುತ್ತಾರೆ. ಮತ್ತೆ ಸ್ತ್ರೀ-ಪುರುಷರ ಸಂಬಂಧವನ್ನು ಮುಖ್ಯ ತಾತ್ವಿಕ ನೆಲೆಯಾಗಿ ಸ್ವೀಕರಿಸುತ್ತಾರೆ. ಅಲ್ಲಿನ ಸ್ತ್ರೀ ವಿವಾಹದ ಚೌಕಟ್ಟಿನೊಳಗಿದ್ದು ಏಕಪತಿತ್ವವನ್ನು ನಿರಾಕರಿಸುವ ಸ್ತ್ರೀಯರು ಅದರ ಹಿಂದಿನ ಹಂಬಲ ತಾಯ್ತನವನ್ನು ಬಯಸುತ್ತಾರೆ. ವಿಭಿನ್ನ ಮನೋಭಾವದ ಸ್ತ್ರೀಯರು ಇಲ್ಲಿ ಕಂಡುಬರುತ್ತಾರೆ. ಹಾಗೆಯೇ ಏಕಪತಿತ್ವ ಒಪ್ಪುವ ಗರತಿಯರು, ಒಪ್ಪದವರು, ವೈಧವ್ಯವನ್ನು ಒಪ್ಪುವವರು, ಒಪ್ಪದವರು ಹೀಗೆ ಪರಂಪರೆಯ ಸ್ವೀಕರಿಸುವ ; ಸ್ವೀಕರಿಸದ ವಿಭಿನ್ನ ಮನೋಭಾವದ ಸ್ತ್ರೀಯರು ಕಾರಂತರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

ದುಡಿಮೆ ಕಾರಂತರ ಕಾದಂಬರಿಗಳ ಸ್ತ್ರೀಯರು ಕಂಡುಕೊಂಡ ಬಹುಮುಖ್ಯ ಅಂಶಗಳಲ್ಲಿ ಒಂದಾಗಿದೆ. ತನ್ನ ಜೀವಿತದ ಅವಧಿಯಲ್ಲಿ ಕಠಿಣ ಪರಿಸ್ಥಿತಿಯನ್ನು ನಿಭಾಯಿಸಿಕೊಂಡು ಹೋಗುವ ಸಹನೆಯನ್ನು ಕಾಣಬಹುದು. ಗಂಡಸರ ಹೊಣೆಗಾರಿಕೆಯಿಲ್ಲದ ಜೀವನ, ಬದುಕನ್ನು ನಿಭಾಯಿಸಲಾರದ ಗಂಡುಗಳು ಮನೆಯಿಂದಲೇ ಪಲಾಯನಮಾಡಿ ದೇಶಾಂತರ ಹೋದಾಗ ಮಕ್ಕಳ ಲಾಲನೆ - ಪಾಲನೆಯೊಂದಿಗೆ ಹೊಲ ಗದ್ದೆಗಳಲ್ಲಿ ಮೈಮುರಿದು ದುಡಿಯುವ ಸ್ತ್ರೀಯರು ನಿಜವಾಗಿಯೂ ಸ್ವಾಭಿಮಾನಿಗಳಾಗುತ್ತಾರೆ. 'ಮರಳಿ ಮಣ್ಣಿಗೆ' ಯ ಸರಸೋತಿ-ಪಾರೋತಿ ; ನಾಗವೇಣಿ, ಸತ್ಯಭಾಮೆ, 'ಕರುಳಿನ ಕರೆ 'ಯ ಭಾಗೀರಥಿ ಮತ್ತು ವೆಂಕಮ್ಮ, ಇಡೀ ಸಂಸಾರದ ಕೇಂದ್ರಬಿಂದುವಾಗಿ ದುಡಿಯುವ 'ಚೋಮನ ದುಡಿ' ಯ ಬೆಳ್ಳಿ, 'ಇಳೆಯೆಂಬ' ಕಾದಂಬರಿಯ ಜ್ವಾಲಾ ಕುಲಕರ್ಣಿ ಹಾಗೂ ಅರುಂಧತಿ ಪಾಟೀಲ - ಮುಂತಾದವರು ಸ್ವತಂತ್ರ ಬದುಕು, ಸ್ವಾವಲಂಬಿಗಳಾಗಿ ಉದ್ಯೋಗ ನಿರತರಾಗುವುದನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಸಮಾವೇಶಗೊಳಿಸುತ್ತಾರೆ. ಹಾಗಾಗಿ "ಕಾರಂತರ ಕಾದಂಬರಿಗಳಲ್ಲಿ ಕಾಣುವ ಮಹಿಳೆಯರನ್ನು ಕುರಿತು ಅಭ್ಯಾಸ ಮಾಡುವುದು ಎಂದರೆ ಅವರ ಕಾದಂಬರಿಗಳಲ್ಲಿನ ಪುರುಷರನ್ನು , ಸಮಾಜವನ್ನು, ಬದುಕಿನ ಮೌಲ್ಯಗಳನ್ನೂ ಕುರಿತ ಅಭ್ಯಾಸ ಕೂಡ ಆದಾಗಿರುತ್ತದೆ" ಎಂದು ಬಿ.ಎನ್. ಸುಮಿತ್ರಾ ಬಾಯಿಯವರು ಅಭಿಪ್ರಾಯಪಡುತ್ತಾರೆ (ಬಿ. ಎನ್. ಸುಮಿತ್ರಾ ಬಾಯಿ, ೧೯೯೩, ಪು. ೧).

ಏಕೆಂದರೆ ಕಾರಂತರು ಕಾದಂಬರಿಯ ಆವರಣವನ್ನು ಈ ಎಲ್ಲಾ ಮೂಲಗಳಿಗೂ ಆಂತರಿಕ ಸಂಬಂಧವನ್ನಿಟ್ಟುಕೊಂಡು ಇಡೀ ಸಮಾಜವನ್ನು ಅವಲೋಕನ ಮಾಡುತ್ತಾರೆ. ಮನುಷ್ಯ ಸ್ವಭಾವದ ಎಲ್ಲಾ

ಬಗೆಯ ಗುಣಗಳನ್ನು ಕಾರಂತರು ಗ್ರಹಿಸುತ್ತಾರೆ. ಈ ರೀತಿಯ ಅಧ್ಯಯನವನ್ನು ಮಾಡುವಾಗ ಸಾಮಾಜಿಕ, ಸಾಹಿತ್ಯಕ ಪರಿಕರಗಳನ್ನು ಸಂಶೋಧನೆಯ ವ್ಯಾಪ್ತಿಗೆ ಬಳಸಿಕೊಳ್ಳಲಾಗಿದೆ. ಮಾನವ ಜೀವಿಗೆ ಕಾಮವು ತೀರ ನಿಸರ್ಗ ಸಹಜ ಆಸಕ್ತಿಯೆಂಬುದು ಕಾರಂತರ ನಿಲುವು. "ಕಾಮವು ಹಸಿವು, ನೀರಡಿಕೆಗಳಂತೆ ಒಂದು ಮೂಲಭೂತ, ಸಹಜ, ಜೈವಿಕ ಪ್ರವೃತ್ತಿ. ಈ ಪ್ರವೃತ್ತಿಯಿಂದ ಯಾವ ಆರೋಗ್ಯಕರ ಜೀವಿಯೂ ತಪ್ಪಿಸಿಕೊಳ್ಳುವಂತಿಲ್ಲ. ಆದರೆ ಮನುಷ್ಯ ಸಮಾಜ ಉದಯಗೊಂಡು ವಿಕಾಸಗೊಳ್ಳುತ್ತಿದ್ದಂತೆ ಈ ಸಹಜ ಸಂಬಂಧಗಳು ಹೆಚ್ಚು ಹೆಚ್ಚು ಕೃತಕವೂ, ಸಂಕೀರ್ಣವೂ ಆಗತೊಡಗಿದವು" (ಟಿ.ಪಿ. ಅಶೋಕ, ೧೯೯೯, ಪು. ೧-೨). ಇಂದಿನ ಆಧುನಿಕತೆ, ಜಾಗತೀಕರಣದ ಹೊಸ್ತಿಲಿನ ವಿಶ್ವಗ್ರಾಮ (Global Village)ದ ಸಂದರ್ಭದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯ ಹಾಗೂ ಗಂಡು - ಹೆಣ್ಣಿನ ಸಂಬಂಧವು ತೀರಾ ಕೃತಕವಾಗಿದೆ. ದಾಂಪತ್ಯ ಎನ್ನುವುದು ಮಾಂಗಲ್ಯ ಕಟ್ಟಿದ ಮಾತ್ರಕ್ಕೆ ನೆಮ್ಮದಿಯಿರಲಾರದು. ಮೈ ಮತ್ತು ಮನಸ್ಸುಗಳ ಮಿಲನವಾದಾಗ ಮಾತ್ರ ಅದು ಪರಿಪೂರ್ಣ ದಾಂಪತ್ಯವಾಗುತ್ತದೆ. 'ಮೈಮನಗಳ ಸುಳಿಯಲ್ಲಿ' ಕಾರಂತರು ವಿವರಿಸುವ ಅಂಶವೂ ಕೂಡಾ ಇದೇ ಆಗಿದೆ. ಇದಕ್ಕೆ ಮಂಜುಳೆಯ ವೈಚಾರಿಕ ಆಲೋಚನಾ ಕ್ರಮವೇ ಸಾಕ್ಷಿಯಾಗುತ್ತದೆ.

'ಧರ್ಮರಾಯನ ಸಂಸಾರ', 'ನಂಬಿದವರ ನಾಕ ನರಕ', 'ಸರಸಮ್ಮನ ಸಮಾಧಿ', 'ಚೋಮನ ದುಡಿ', 'ಕುಡಿಯರ ಕೂಸು' ಮುಂತಾದ ಕಾದಂಬರಿಗಳಲ್ಲಿ ಕಾರಂತರು ಪ್ರತಿಪಾದಿಸುವ ಸ್ತ್ರೀ ಲೈಂಗಿಕತೆಯನ್ನು ಉದಾರವಾದಿ ಮಾನವೀಯತೆಯಿಂದಲೇ ನೋಡಬೇಕಾಗುತ್ತದೆ. ಈ ಪ್ರಕ್ರಿಯೆ ಗರತಿಯರಾದ ಕೆಲವರಲ್ಲಿಯೂ ತಾಯ್ತನದ ಹಂಬಲವಾಗಿ ಕಾಡುತ್ತದೆ. ವಿವಾಹದ ಚೌಕಟ್ಟಿನ ಹೊರಗಿನ ಸಂಬಂಧವನ್ನು ಕಾರಂತರು ಅದು ಪರಿಸ್ಥಿತಿಯ 'ಅನಿವಾರ್ಯ'ವಾಗಿಯೋ ಅಥವಾ 'ಆಕಸ್ಮಿಕ'ವಾಗಿಯೋ ತರುತ್ತಾರೆ. ಯಾಂತ್ರಿಕವಾದ ಜೀವನ ಕ್ರಮವು ಅಸಾಧುವಾದುದು. 'ಧರ್ಮರಾಯನ ಸಂಸಾರ'ದ ಸರಸ್ವತಿಯ ನಡವಳಿಕೆಯನ್ನು ನೋಡಿದಾಗ ಅದು ಮನುಷ್ಯ ಸಹಜ 'ದೌರ್ಬಲ್ಯ'ವಾಗಿ ಕಂಡುಬರುತ್ತದೆ. ಸರಸ್ವತಿ ಪ್ರತಿಭಟನೆ ರೂಪದಲ್ಲಿ ನಡೆದುಕೊಂಡರೂ ಅದು ಅವಳ ಅತೃಪ್ತ ಬಯಕೆಯಾಗಿ ಕಾರಂತರು ಕಾಣಿಸುತ್ತಾರೆ. 'ಒಂಟಿ ದನಿ' ಯ ಕಾಂತಿಯೂ ಸಹ ತನ್ನ ಮುದಿ ಗಂಡ ಚಂದೂಲಾಲರ ಇಬ್ಬಂದಿತನಕ್ಕೆ ರೋಸಿಹೋಗಿ ಅನಂತಕೃಷ್ಣನೆಂಬ ವಿಮರ್ಶಕನೊಂದಿಗೆ ಗುಪ್ತ ಪ್ರಣಯವನ್ನಿರಿಸಿಕೊಳ್ಳುತ್ತಾಳೆ. 'ಸರಸಮ್ಮನ ಸಮಾಧಿ'ಯ ಸರಸಮ್ಮ ಕೂಡಾ ರೋಗಿಷ್ಟ ಗಂಡನೊಂದಿಗೆ ಯಾವ

ಲೈಂಗಿಕ ಸುಖವನ್ನೂ ಪಡೆಯದ ಅತೃಪ್ತ ಕಾಮಿಯಾಗಿದ್ದಾಳೆ. ಇದೊಂದು ಬಗೆಯಲ್ಲಿ ಕಾರಂತರು ಸಾಮಾಜಿಕ ವ್ಯಂಗ್ಯವೂ, ಆತ್ಮವಿಮರ್ಶೆಯೂ ಆಗುವಂಥ ವೈಚಾರಿಕ ಚಿಂತನೆಯನ್ನು ಮನುಷ್ಯನಲ್ಲಿ ಉಂಟುಮಾಡುತ್ತದೆ.

ಆದರ್ಶ ದಾಂಪತ್ಯವೆಂದರೆ ಅದು ಗಂಡು ಹೆಣ್ಣಿನ ಸಾಂಸಾರಿಕ ಹೊಣೆಗಾರಿಕೆಯನ್ನು ಪ್ರತಿನಿಧಿಸುತ್ತದೆ. ತಾಯ್ತನವು ಹೆಣ್ಣಿಗೆ ಅನಿವಾರ್ಯವಾದಂತೆ ಗಂಡಿಗೂ ಸಹ ತಂದೆತನದ ಜವಾಬ್ದಾರಿ ಸಹಜವಾಗಿರುತ್ತದೆ. ನಮ್ಮ ರೂಢಿ - ಸಂಪ್ರದಾಯಗಳು ಮಾತ್ರ ಅವುಗಳನ್ನು ಹೆಣ್ಣಿಗೆ ಮಾತ್ರ ಸಹಜವೆಂಬಂತೆ ಆರೋಪಿಸುವುದರ ಮೂಲಕ ಪುರುಷನನ್ನು ಹೊಣೆಗಾರಿಕೆಯಿಂದ ದೂರ ಉಳಿಸಿಬಿಡುತ್ತವೆ. ಆದರೆ ಕಾರಂತರ 'ಸನ್ಯಾಸಿಯ ಬದುಕು', 'ಕನ್ನಡಿಯಲ್ಲಿ ಕಂಡಾತ', 'ಬೆಟ್ಟದ ಜೀವ', 'ಮರಳಿ ಮಣ್ಣಿಗೆ' ಮುಂತಾದ ಕಾದಂಬರಿಗಳನ್ನು ಅವಲೋಕಿಸಿದರೆ ಇಲ್ಲಿ ತಂದೆತನದ ನೈತಿಕ ಜವಾಬ್ದಾರಿಯನ್ನು ಹೊತ್ತಿರುವ ಪುರುಷರನ್ನು ಕಾಣಬಹುದು. ಸ್ತ್ರೀವಾದಿ ನಿಲುವಿನ ಮುಖ್ಯ ಅಂಶವೂ ಇದನ್ನೇ ಪ್ರತಿನಿಧಿಸುತ್ತದೆ. ಹೆಣ್ಣಿನ ಜೈವಿಕ ತಾಯ್ತನದೊಂದಿಗೆ ಗಂಡಿನ ಹೊಣೆಗಾರಿಕೆ, ಪಿತೃವಾತ್ಸಲ್ಯವೂ ಹೊರಹೊಮ್ಮುವುದರಿಂದ ಒಂದು ಮಗುವಿನ ಮನೋವಿಕಾಸದಲ್ಲಿ ಇಬ್ಬರ ಸಹಕಾರವೂ ಅಗತ್ಯವಾಗಿರುತ್ತದೆ. ಆದರೆ ಗಂಡು - ಹೆಣ್ಣುಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸುವ ಸಮಾಜ ತಾಯ್ತನವನ್ನು ವೈಭವೀಕರಿಸುತ್ತಾ ತಂದೆತನಕ್ಕೆ ಎರಡನೆಯ ಆದ್ಯತೆಯನ್ನು ನೀಡಿದೆ. ಇದರಿಂದ ಸ್ತ್ರೀಯನ್ನು ಪತ್ನಿತ್ವ ಹಾಗೂ ತಾಯ್ತನದ ಪರಿಧಿಯಲ್ಲಿ ನೋಡಲು ಯತ್ನಿಸುತ್ತದೆ. ಇಂತಹ ಧೋರಣೆಯನ್ನು ಸ್ತ್ರೀವಾದ ವಿರೋಧಿಸುತ್ತದೆ. ಕಾರಂತರು ಈ ವಿಚಾರಗಳನ್ನು ವಾಸ್ತವವಾದಿ ಹಿನ್ನೆಲೆಯಿಂದಲೇ ಗ್ರಹಿಸುತ್ತಾರೆ. ಹೀಗಾಗಿ ಕಾರಂತರ ಕಾದಂಬರಿಗಳಲ್ಲಿ ಬರುವ ಜೀವನ ದೃಷ್ಟಿ ಹಾಗೂ ಸಾಮಾಜಿಕ ಸ್ವರೂಪವು ಒಂದು ರೀತಿಯಿಂದ ಚಾರಿತ್ರಿಕ ಬದಲಾವಣೆಗಳ ಕೈಗನ್ನಡಿಯಾಗಿದೆ.

ವೈಧವ್ಯದ ಪರಿಕಲ್ಪನೆಗೆ ಕಾರಂತರು ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ. ವೈದಿಕ ಸಂಪ್ರದಾಯದ ಬ್ರಾಹ್ಮಣರು ವೈಧವ್ಯವನ್ನು ಒಂದು ಸಾರ್ವತ್ರಿಕ ಸಮಸ್ಯೆಯಾಗಿ ಕಾಣುತ್ತಾರೆ. ಅದನ್ನು ವೈಭವೀಕರಿಸುವುದರ ಮೂಲಕ ಹದಿಹರೆಯದಲ್ಲೇ ಅಕಾಲ ಮೃತ್ಯುವಿಗೆ ಬಲಿಯಾದ ಎಷ್ಟೋ ಬ್ರಾಹ್ಮಣ ವಿಧವೆಯರ ಕತ್ತಲೆಯ ಬಾಳು ಅಲ್ಲಿಯೇ ಕಮರಿ ಹೋಗುತ್ತದೆ. ಅವರು ಅನುಭವಿಸುವ ನರಕಯಾತನೆ, ಪುರುಷರ ಶೋಷಣೆ, ದೌರ್ಜನ್ಯಗಳನ್ನು ಕಾರಂತರು ಉಗ್ರವಾಗಿಯೇ ಖಂಡಿಸಿದ್ದಾರೆ. 'ಕನ್ಯಾಬಲಿ' ಕಾದಂಬರಿ ಬ್ರಾಹ್ಮಣ ಸ್ತ್ರೀಯರ ವೈಧವ್ಯದ ಬದುಕನ್ನು ಹೇಗೆ ನರಕವನ್ನಾಗಿಸಲಾಗಿತ್ತು ಎಂಬುದರ ಪ್ರಾತಿನಿಧಿಕ ಕಾದಂಬರಿಯಾಗಿದೆ. ವಿಶೇಷವಾಗಿ ಶಿವರಾಮ ಕಾರಂತರು

ಕಾದಂಬರಿಯಲ್ಲಿ ವೃದ್ಧೆಯರು ; ಅದರಲ್ಲಿಯೂ ವಿಧವೆಯರ ಜೀವನದ ಅನಾವರಣ ಮಾಡುತ್ತಾರೆ. ಇದು ಕಾರಂತರ ಸಾಮಾಜಿಕ ಕಳಕಳಿ, ಸಾಮಾಜಿಕ ಪ್ರಜ್ಞೆ, ಸ್ತ್ರೀ ಅಂತಃಕರಣ - ಇತ್ಯಾದಿ ಅಂಶಗಳು ಕಾರಣವಾಗಿವೆ. ಹಿಂದೂ ಸಮಾಜದಲ್ಲಿ 'ವಿಧವೆ 'ಎಂದರೆ ಅಮಂಗಳ, ಕೇಡು, ಸಮೃದ್ಧಿಯ ಹೀನತೆ, ಪ್ರಯೋಜನಕ್ಕೆ ಬಾರದ 'ವಸ್ತು' ವಾಗಿಯೇ ಪರಿಗಣಿಸಲ್ಪಟ್ಟಿದ್ದಾಳೆ. ಪ್ರಗತಿಪರ ಚಿಂತನೆ, ವೈಚಾರಿಕ ದೃಢತೆ, ಬಂಡುಕೋರತನ ಕಾರಂತರನ್ನು ಎಚ್ಚರಿಸಿ, ಸಾಮಾಜಿಕ ಪ್ರಗತಿಗೆ ಪೂರಕವಾಗಿ ಅವರನ್ನು ನಿರ್ಮಿಸಿವೆ. ವಿಧವೆಯರ ಹೀನಾಯ ಜೀವನ ಮುತ್ತೈದೆ ತನದ ವೈಭವೀಕರಣವಾಗಿ ಸಮಾಜ ಪರಿಗಣಿಸಿದೆ. ಹೀಗೆ ವಿಧವೆಯರನ್ನು ಕೆಲಸಕ್ಕೆ ಬಾರದವರೆಂದು ಪರಿಗಣಿಸಿ, ಅವರನ್ನು ಅವಜ್ಞೆಗೆ ಒಳಪಡಿಸಲಾಗಿದೆ. ಕಾರಂತರು ಹೀಗೆ ಸ್ತ್ರೀಯರ ಮೇಲಿನ ದೌರ್ಜನ್ಯ, ಶೋಷಣೆಗಳನ್ನು ಬಯಲಿಗೆಳೆಯುತ್ತಾರೆ. ಹುಟ್ಟಿನಿಂದ ಯಾವ ಸುಖವನ್ನೂ ಕಾಣದೆ, ದಾಂಪತ್ಯ ಸುಖವೂ ಇಲ್ಲದೆ, ಹೆಚ್ಚಾಗಿ ಏಕಾಕಿಯಾಗಿಯೇ ಮೂಲೆಯಲ್ಲಿ ಮೌನವಾಗಿ ಕಾಲ ಕಳೆದ ಮೂಕಜ್ಜಿ, ಮಾಗಿದ ವಯಸ್ಸಿನಲ್ಲಿ ವೈಚಾರಿಕತೆಯ ಅದ್ಭುತ ದರ್ಶನ ಮಾಡುವುದು ; 'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಕಂಡುಬರುತ್ತದೆ. ಕಾರಂತರು ಮೂಕಜ್ಜಿಯನ್ನು ವಿಶಿಷ್ಟ ವ್ಯಕ್ತಿಯಾಗಿ, ಮಹಾನ್ ದಾರ್ಶನಿಕ ವ್ಯಕ್ತಿಯಾಗಿ ಕಾಣುತ್ತಾರೆ. 'ಮರಳಿ ಮಣ್ಣಿಗೆ 'ಯ ಸರಸೋತಿ, 'ಕರುಳಿನ ಕರೆ 'ಯ ವೆಂಕಮ್ಮ 'ಇನ್ನೊಂದೇ ದಾರಿ'ಯ ಗಂಗಮ್ಮ ಹೊನ್ನಜ್ಜಿ 'ಅಳಿದ ಮೇಲೆ 'ಯ ಪಾರ್ವತಿ, ಮೂಕಾಂಬಿಕೆ, 'ಸನ್ಯಾಸಿಯ ಬದುಕು' ವಿನ ರುಕ್ಮಾಯಿ, 'ಸಮೀಕ್ಷೆ 'ಯ ನರಸಜ್ಜಿ 'ಕನ್ನಡಿಯಲ್ಲಿ ಕಂಡಾತ 'ದ ಭಾಗ್ಯಮ್ಮ 'ನಂಬಿದವರ ನಾಕ ನರಕ 'ದ ಸಿಂಗಾರಮ್ಮ ಸಾವಿತ್ರಿ ; 'ಶನೀಶ್ವರನ ನೆರಳಲ್ಲಿ 'ಯ ಕಾವೇರಮ್ಮ ಮುಂತಾದವರು ವೈಧವ್ಯ ಪ್ರಾಪ್ತಿಯಾದರೂ ಸಹ ತಮ್ಮ ಶ್ರಮ, ಬದುಕಿನ ಆಶಯಗಳೊಂದಿಗೆ ಹೋರಾಡಿ ಯಶಸ್ಸಿನ ಜೀವನ ನಡೆಸುತ್ತಾರೆ. ಕಾರಂತರು ವಿಶ್ಲೇಷಿಸುವಂತೆ ಬ್ರಾಹ್ಮಣ ಕುಟುಂಬದಲ್ಲಿ ಮಾತ್ರ ವಿಧವಾ ಸಮಸ್ಯೆಯನ್ನು ಒಂದು ಸಾಂಪ್ರದಾಯಿಕ ಆಚರಣೆಯಾಗಿ ಬೆಳೆಸಲಾಗುತ್ತಿದೆ. ಆದರೆ ಶ್ರಮಿಕವರ್ಗ ಅಥವಾ ಶೂದ್ರ ವರ್ಗದಲ್ಲಿ ಈ ಬಗೆಯ ಆಚರಣೆ ಕಂಡುಬರುವುದಿಲ್ಲ. ಕಾರಂತರ ಕಾದಂಬರಿಗಳ ಅಧ್ಯಯನ ಈ ದೃಷ್ಟಿಯಿಂದ ಒಂದು ಕುತೂಹಲಕರ ಅಧ್ಯಯನವಾಗುತ್ತದೆ. ಕಾರಂತರ ದೃಷ್ಟಿಯಲ್ಲಿ ಇಂತಹ ವಿಧವಾ "ವೃದ್ಧೆಯರು ಕೆಲಸಕ್ಕೆ ಬಾರದ, ಬೌದ್ಧಿಕವಾಗಿ ಕುಂದಿದ, ಅರಳು ಮರುಳಿನ ಭ್ರಮಾಜೀವಿಗಳಲ್ಲ. ಪ್ರಕೃತಿಯಂತೆ ಚೇತೋಹಾರಿಯಾದ ಮನಸ್ಸುಳ್ಳ ಸಾವಿನ ಬಗೆಗೆ ಲಘುವಾಗಿ, ಅಷ್ಟೇ ನಿರ್ಭೀತಿಯಿಂದ ಮಾತನಾಡಬಲ್ಲ

ಪರಂಪರೆಯೊಳಗಿದ್ದೂ ಜೀವನ ದೃಷ್ಟಿಯನ್ನು ಬದಲಿಸಬಲ್ಲ ಕಾಲದ ವ್ಯಕ್ತಿಗಳಾಗಿ ಗೌರವಕ್ಕೆ ಪಾತ್ರರಾಗುತ್ತಾರೆ" (ಸುನೀತಾ ಎಂ. ಶೆಟ್ಟಿ, ೨೦೦೦, ಪು. ೪೫-೪೬) ಎಂದು ಸುನೀತಾ ಎಂ. ಶೆಟ್ಟಿಯವರು ಅಭಿಪ್ರಾಯಪಡುತ್ತಾರೆ.

ವೈಧವ್ಯದ ಸಮಸ್ಯೆಯಿಂದ ಸ್ತ್ರೀ ಈ ಸಮಾಜದಿಂದ ಅವಗಣನೆಗೆ ಒಳಗಾಗುವುದು ಒಂದು ಬಗೆಯಾದರೆ; 'ಬಂಜೆ'ಎಂದು ಸ್ತ್ರೀಯನ್ನು ನಿಂದಿಸಿ, ಅವಮಾನ ಮಾಡುವ ಪ್ರಕ್ರಿಯೆ ಪುರುಷನಿಷ್ಠ ಸಾಮಾಜಿಕ ವ್ಯವಸ್ಥೆಯ ಶಾಪವಾಗಿ ಪರಿಣಮಿಸಿದೆ. ಹಾಗಾಗಿ ಬಂಜೆಯನ್ನು ಕೇಡಿಗೆ ಸಂಕೇತವಾಗಿ ಕಂಡುಕೊಳ್ಳಲಾಗಿದೆ. ಕಾರಂತರು ಈ ಬಗೆಯ ಸಾಮಾಜಿಕ ಮೌಢ್ಯಗಳನ್ನು ನಿರಾಕರಿಸಿ, ಹೊಸ ಚಿಂತನಕ್ರಮದ ಪ್ರಗತಿಪರತೆಯನ್ನು ಅನಾವರಣಗೊಳಿಸುತ್ತಾರೆ. ಹಾಗೆಯೇ ಸ್ತ್ರೀಯ ಬಂಜೆತನವನ್ನು ನಿಕೃಷ್ಟವಾಗಿ ಕಾಣುವುದರ ಮೂಲಕ ತಾಯ್ತನವನ್ನು ವೈಭವೀಕರಿಸಲಾಗುತ್ತಿದೆ. ಸ್ತ್ರೀವಾದಿಗಳು ತಾಯ್ತನದ ವೈಭವೀಕರಣವನ್ನು ನಿರಾಕರಿಸುತ್ತಾರೆ; ಹಾಗೆಯೇ ಕಾರಂತರೂ ಕೂಡಾ. ಕೇವಲ ಸ್ತ್ರೀಯನ್ನೇ 'ಬಂಜೆ'ಯೆಂದು ಹಳಿದು ಪುರುಷನನ್ನು ಉನ್ನತ ಮಟ್ಟದಲ್ಲಿರಿಸಲಾಗಿದೆ. ಆದರೆ ಕಾರಂತರ ಕೆಲವು ಕಾದಂಬರಿಗಳು ಈ ಪ್ರತಿಕ್ರಿಯೆಗೆ ತೀವ್ರವಾಗಿ ಸ್ಪಂದಿಸುತ್ತವೆ. 'ಮರಳಿ ಮಣ್ಣಿಗೆ'ಯಲ್ಲಿ ಐತಾಳರು ಎರಡನೇ ಮದುವೆಯಾಗಿ ಮಗು ಪಡೆಯುವುದರ ಮೂಲಕ ಮೊದಲ ಹೆಂಡತಿ ಪಾರ್ವತಿಯನ್ನು ಬಂಜೆಯಾಗಿಯೇ ಕಾಣುವುದು ಇದಕ್ಕೆ ಪುಷ್ಟಿಯನ್ನು ನೀಡುತ್ತದೆ. ಆದರೆ ಕಾರಂತರು ಆಕೆಯಲ್ಲಿ ಮಾತೃತ್ವದ ಮೌಲ್ಯವನ್ನು ಕಾಣುವುದರಲ್ಲಿ ಸಾರ್ಥಕತೆಯನ್ನು ಕಾಣಿಸಿದ್ದಾರೆ. ''ಹೆತ್ತಳಾ ತಾಯಿ' ಯ ಕುಸುಮ, 'ಮೈಮನಗಳ ಸುಳಿಯಲ್ಲಿ' ಯ ಮಂಜುಳೆ ಬಂಜೆಯಾಗಿ ಒಪ್ಪದ ಅವಳ ಮನಸ್ಸು ಒಂದು ಮಗುವನ್ನಾದರೂ ಪಡೆಯಬೇಕೆಂದು ಹಂಬಲಿಸುತ್ತಾಳೆ. 'ಹೆತ್ತಳಾ ತಾಯಿ' ಕಾದಂಬರಿಯ ಕುಸುಮ ಬಂಜೆಯೆಂಬ ಕೊರಗು ಹಾಗೂ ತಾಯ್ತನದ ಹಂಬಲದಿಂದ ವೆಂಕಪ್ಪಯ್ಯನನ್ನು ಕೂಡಿ ಮಗುವನ್ನು ಪಡೆಯುವುದರ ಮೂಲಕ ತನ್ನ ಸ್ತ್ರೀತ್ವವನ್ನು ಗಟ್ಟಿಗೊಳಿಸಿಕೊಳ್ಳುತ್ತಾಳೆ. ಇದು ಪುರುಷನ ಅಸ್ತಿತ್ವಕ್ಕೆ ಸವಾಲಾಗಿ ಕಂಡುಬರುತ್ತದೆ. 'ಕೇವಲ ಮನುಷ್ಯರು' ಕಾದಂಬರಿಯಲ್ಲಿ ತಾಯ್ತನದ ಹಂಬಲದಲ್ಲಿ ವಿಶ್ವನಾಥಯ್ಯನ ಮಡದಿ ಶಾಂತೆ ಗಂಡನಿಂದ ದೂರವಾಗಿ ಅಭಿದಾನಂದರನ್ನು ಕೂಡುತ್ತಾಳೆ. ಅದರಿಂದಲೂ ಅವಳಿಗೆ ಗರ್ಭ ನಿಲ್ಲುವುದಿಲ್ಲ. ಇದರಿಂದ ತನಗೆ ಮಕ್ಕಳಾಗದಿದ್ದಕ್ಕೆ ಗಂಡನನ್ನು ದೂರಿದ್ದು ಕೊನೆಗೆ ಆ ಬಗ್ಗೆ ಪಶ್ಚಾತ್ತಾಪಪಡುತ್ತಾಳೆ. ತನ್ನ ದೋಷವನ್ನು ಪ್ರಾಮಾಣಿಕತೆಯಿಂದ ಒಪ್ಪಿಕೊಳ್ಳುತ್ತಾಳೆ. 'ಒಂಟಿ ದನಿ' ಯ ಚಂದೂಲಾಲ ಷಹಾ ಅನೇಕ ಹೆಣ್ಣುಗಳೊಂದಿಗೆ ಸಂಬಂಧವಿರಿಸಿಕೊಳ್ಳುತ್ತಾನೆ. ಇದರಿಂದ ಅವರು ಗರ್ಭಧರಿಸುವರೆಂಬ

ಭಯದಿಂದ ತಾನೇ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುತ್ತಾನೆ. ಎರಡನೆಯ ಮದುವೆಯಾದ ಕಾಂತಿಬೆನ್ ವಿಮರ್ಶಕನಾದ ಅನಂತಕೃಷ್ಣನೊಂದಿಗೆ ಗುಪ್ತ ಪ್ರಣಯದಿಂದ ಮಕ್ಕಳನ್ನು ಪಡೆಯುತ್ತಾಳೆ. ಚಂದೂಲಾಲರಿಗೆ ಇವಳ ವಂಚನೆ ತಿಳಿದು ಹರಕೆಯ ಪ್ರತಿಫಲವೆಂದು ಸುಮ್ಮನಿರುತ್ತಾರೆ. ಗಂಡನ ವಂಚನೆಯನ್ನು ಅರಿತ ಕಾಂತಿ ನೇರವಾಗಿ ಪ್ರತಿಭಟಿಸುತ್ತಾಳೆ. ಹೀಗೆ ಇಂಥ ಸೂಕ್ಷ್ಮ ವಿಚಾರಗಳನ್ನು ಕಾರಂತರು ಯಾವ ನಿರ್ಭಿಡೆಯಿಂದ ಪ್ರತಿಭಟಿಸುತ್ತಾರೆ. ಹೆಣ್ಣಾಗಲಿ, ಗಂಡಾಗಲಿ ಯಾವ ಅನುಕಂಪವೂ ಇಲ್ಲದೇ ವಸ್ತುನಿಷ್ಠತೆಯನ್ನು ಕಟ್ಟಿಕೊಡುತ್ತಾರೆ. ಚಂದೂ ಲಾಲ ತಾನು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರೂ, ಹೆಂಡತಿಗೆ 'ಹರಕೆ' ಹೇಳಿಕೋ ಎಂದು ಪ್ರೇರೇಪಿಸುವುದು ಮೋಸದ ಸಂಚನ್ನು ಬಯಲಿಗೆಳೆಯುವ ಪ್ರಯತ್ನವಾಗಿದೆ.

ಅತ್ಯಂತ ಕಠಿಣ ಪರಿಸ್ಥಿತಿ, ಬಡತನ, ಜೀವನದ ಜಂಜಾಟವನ್ನು ಮರೆಯಲು ಇಲ್ಲಿನ ಸ್ತ್ರೀಯರು ಸಂಗೀತ, ಸಾಹಿತ್ಯ, ಕಲೆಯನ್ನು ಜೀವನದ ಉಸಿರಾಗಿ ಕಂಡುಕೊಳ್ಳುತ್ತಾರೆ. ಅದರಿಂದಾಗಿಯೇ ಜೀವನದ ವಿಕಾಸವನ್ನು ಬದುಕಿನ ಹೊಸ ಬದಲಾವಣೆಯನ್ನು ಕಾಣಲು ಹಾತೊರೆಯುತ್ತಾರೆ. 'ಮೈಮನಗಳ ಸುಳಿಯಲ್ಲಿ'ಯ ಮಂಜುಳೆ ಬೆಳೆಸಿಕೊಳ್ಳುವ ಸಂಗೀತದ ಸಂಸ್ಕಾರ, 'ಮರಳಿ ಮಣ್ಣಿಗೆ'ಯ ನಾಗವೇಣಿ ಹಾಗೂ ರಾಮ ಇವರ ಸಂಗೀತದ ಕಲಾ ಪರಿಶ್ರಮ, ರಾಮನ ಕಡಲಿನ ಮೋಹ, 'ಒಂಟಿದನಿ' ಯ ನಯನತಾರೆಯ ನೃತ್ಯಕಲೆ, 'ಮೊಗಪಡೆದ ಮನ' ಕಾದಂಬರಿಯ ವ್ಯಾಸನ ನೃತ್ಯ ನೈಪುಣ್ಯ ; ಟೂಬಾಳ ಕಲಾರಾಧನೆ, ನೃತ್ಯದ ನಿರಂತರ ಪರಿಶೋಧನೆ, 'ಇಳಿಯೆಂಬ' ದ ಆನಂದರಾಯ ಹಾಗೂ ಜ್ವಾಲಾ ಕುಲಕರ್ಣಿಯ ನಾಟಕದ ಅಭಿನಯಕಲೆ - ಮುಂತಾದ ಕಲಾ ಪ್ರಕಾರದಲ್ಲಿ ನೈಪುಣ್ಯವನ್ನು ಪಡೆಯುವುದರೊಂದಿಗೆ ಬದುಕಿನ 'ಶ್ರೇಷ್ಠ'ತೆಯನ್ನು ಕಂಡುಕೊಳ್ಳುವುದು - ಕಾರಂತರ ಕಾದಂಬರಿ ಪ್ರಪಂಚದ ಸ್ತ್ರೀಯರ ಕ್ರಿಯಾಶೀಲತೆಯ ಸಂಕೇತವಾಗಿ ವ್ಯಕ್ತವಾಗುತ್ತದೆ. ಜೊತೆಗೆ ಆಧುನಿಕ ಶಿಕ್ಷಣದ ಪರಿಣಾಮವನ್ನು ತೆರೆದಿಡುತ್ತದೆ. ಇದರಿಂದ ಕಾರಂತರ ಕಲಾ ಅಭಿವ್ಯಕ್ತಿಯ ಪ್ರತಿಮೆಗಳ ಅನಾವರಣ ಪ್ರಸುತ್ತ ಸಂಶೋಧನೆಯ ಉದ್ದೇಶವಾಗಿದೆ.

ದೈವಕೇಂದ್ರಿತ ಸ್ತ್ರೀಪ್ರತೀಕಗಳನ್ನು ಕಾರಂತರ ಕಾದಂಬರಿಗಳ ಮೂಲಕ ಕಂಡುಕೊಳ್ಳುವ ಪ್ರಯತ್ನವೂ ಕೂಡ ಆಗಿದೆ. ಅನಾದಿ ಕಾಲದಿಂದಲೂ ಸ್ತ್ರೀಯನ್ನು ಪೂಜನೀಯವಾಗಿ ಕಂಡಿರುವ ಅಂಶಗಳೂ ಇವೆ. ಕ್ರಮೇಣ ಅವರನ್ನು ತೀರಾ ಹೀನವಾಗಿ ಚಿತ್ರಿಸುವುದರ ಮೂಲಕ ಅನರ್ಥವನ್ನು ಕಲ್ಪಿಸಲಾಗಿದೆ. 'ಶಕ್ತಿಯ ಉಪಾಸನೆ'ಯು

ಸ್ತ್ರೀಯ ಆರಾಧನೆಯ ಒಂದು ಅಂಗವಾಗಿದೆ. "ಎಲ್ಲಿ ಸ್ತ್ರೀಯರು ಪೂಜಿಸಲ್ಪಡುವರೋ, ಅಲ್ಲಿ ದೇವತೆಗಳು ಸಂತೃಪ್ತರಾಗುತ್ತಾರೆ" ಎಂಬ ವೇದೋಕ್ತಿಯೂ ಇದೆ. ಸ್ತ್ರೀದೈವಿಕತೆಯ ತತ್ವವನ್ನು ಭಾರತವಲ್ಲದೇ ಗ್ರೀಕ್ ರೋಮನ್, ಟಿಬೇಟಿಯನ್, ಚೈನಿ ಸಂಪ್ರದಾಯಗಳಲ್ಲೂ ಆಚರಣೆಯ ಪ್ರಾಧಾನ್ಯತೆಯನ್ನು ಹೊಂದಿವೆ. ಶಕ್ತ್ಯುಪಾಸನೆ, ಮಾತೃ ಆರಾಧನೆಗಳಲ್ಲಿ ಈ ಬಗೆಯ ಸಂಪ್ರದಾಯದ ಪ್ರಕ್ರಿಯೆ ಕಂಡುಬರುತ್ತದೆ. ಆದರೆ ಕಾರಂತರ ಕಾದಂಬರಿಗಳ ದೈವಕೇಂದ್ರಿತ ಸ್ತ್ರೀಯರು ಅದಕ್ಕಿಂತಲೂ ಸ್ವಲ್ಪ ಭಿನ್ನರಾಗಿಯೇ ಕಂಡುಬರುತ್ತಾರೆ. ಸ್ತ್ರೀವಾದಿ ಚಿಂತನೆ - ಪ್ರಗತಿಪರ ಯೋಚನೆಗಳ ಮೌಲ್ಯಗಳ ಪರಿಶೀಲನೆಯೂ ಆಗುತ್ತದೆ. ಮುಖ್ಯವಾಗಿ 'ಮೂಕಜ್ಜಿಯ ಕನಸುಗಳು' ಕಾದಂಬರಿಯ ಮೂಕಜ್ಜಿಯ ಆಧ್ಯಾತ್ಮಿಕ ವೈಚಾರಿಕ ಆಲೋಚನಾ ಕ್ರಮಗಳು, ಭೂತ - ಭವಿಷ್ಯತ್ ಕಾಲಗಳ ಅಂತರಂಗದ ಒಳನೋಟಗಳು ವಿಸ್ಮಯವನ್ನುಂಟುಮಾಡುತ್ತವೆ. ಹಾಗೆಯೇ ಆಕೆಯ ವೈಚಾರಿಕ ದೃಷ್ಟಿಕೋನಗಳು ಮುಖ್ಯವಾಗುತ್ತವೆ. 'ಅಳಿದ ಮೇಲೆ' ಕಾದಂಬರಿಯ ಪಾರ್ವತಮ್ಮ, 'ಕುಡಿಯರ ಕೂಸು' ಕಾದಂಬರಿಯಲ್ಲಿ ಬರುವ ಸ್ತ್ರೀಪ್ರತೀಕಗಳು, ವನದೇವತೆಯ ಪರಿಕಲ್ಪನೆ ಇತ್ಯಾದಿ. 'ಸರಸಮ್ಮನ ಸಮಾಧಿ' ಯಲ್ಲಿ ಸರಸಮ್ಮ, ಬೆಳ್ಯಕ್ಕ, ಸರಸಮ್ಮನ ಸಮಾಧಿಯ ಸುತ್ತ ಜನರ ನಂಬಿಕೆಯಿಂದ ಉಂಟಾದ ದೈವತ್ವದ ಪ್ರತಿಪಾದನೆ, ವಿರಸ ದಾಂಪತ್ಯದ ನಿವಾರಣೆಗೆ ಸರಸಮ್ಮನ ಆರಾಧನೆಯ ಅಂಶಗಳು ಕಂಡುಬರುತ್ತವೆ.

ಕಾರಂತರು ತಮ್ಮ ವೈಚಾರಿಕ ಮನೋಭಾವವನ್ನು 'ಬಾಳ್ವೆಯ ಬೆಳಕು' ಕೃತಿಯಲ್ಲಿ ಕಾಣಿಸಿದರೂ ಅವರ ಎಲ್ಲಾ ಬರಹಗಳು, ಕೃತಿಗಳು ವೈಚಾರಿಕತೆಯ ಲೇಪನದೊಂದಿಗೆ ಬಂದಿರುವುದು ಸತ್ಯ ಸಂಗತಿ. ಅವರು ವಿಚಾರವಾದದ ಶೋಧನೆಯನ್ನು ಮೂಕಜ್ಜಿಯಿಂದಲೇ ಮಾಡಿಸುತ್ತಾರೆ. ಆಧುನಿಕತೆ ಮತ್ತು ಸ್ತ್ರೀ ವೈಚಾರಿಕತೆಯ ಸೂಕ್ಷ್ಮ ಸಂವೇದನೆಯ ಅಂಶಗಳು ಕಾರಂತರ ಕೃತಿಗಳಲ್ಲಿ ವಾಸ್ತವವಾದಿ ಹಿನ್ನೆಲೆಯನ್ನಿಟ್ಟುಕೊಂಡು ಅನಾವರಣಗೊಳ್ಳುತ್ತವೆ. ಸುನೀತಾ ಎಂ. ಶೆಟ್ಟಿಯವರು ಸ್ತ್ರೀ ವೈಚಾರಿಕತೆಯ ಕಾರಣವನ್ನು ಹೀಗೆ ಗುರುತಿಸಿದ್ದಾರೆ. "ವೈಚಾರಿಕತೆ ಹುಟ್ಟುವುದು ಎರಡು ಕಾರಣಗಳಿಂದ. ಒಂದು - ಜೀವನಾನುಭವದ ಪರಿಡಿಯಲ್ಲಿ ಸೋಸಿಕೊಂಡಾಗ ತನ್ನದೇ ಆತ್ಮ ನಿರೀಕ್ಷಣೆಯಿಂದ ಹುಟ್ಟುವ ಮಥಿತಾರ್ಥ ಚಿಂತನೆಗಳು. ಎರಡು - ಬಾಹ್ಯ ಶಿಕ್ಷಣದಿಂದ ಉಂಟಾಗುವ ಬೌದ್ಧಿಕ ವಿಕಾಸವೇ ಮೂಲವಾಗಿ, ಒಳಿತು - ಕೆಡುಕುಗಳನ್ನು ಶೋಧಿಸುತ್ತ ಸಾಗುವ ಪ್ರಕ್ರಿಯೆಯು ತನ್ನ ಅಂತಃಸ್ತರದಲ್ಲಿ ಜನಿಯಿಸುವ ಮೌಲ್ಯಾಂಕನಗಳು"

(ಸುನೀತಾ ಎಂ. ಶೆಟ್ಟಿ, ೨೦೦೦, ಪು. ೧೬೬). ಹೀಗೆ ವಿಚಾರವಾದದ ಮೂಲ ಸೆಲೆಯನ್ನು ಕಾರಂತರು ತಮ್ಮ ಕಾದಂಬರಿಗಳ ಪರಿವೇಶದಲ್ಲಿ ಸಮಾವೇಶಗೊಳಿಸುತ್ತಾರೆ.

ಇಲ್ಲಿಯ ಸ್ತ್ರೀ ಪಾತ್ರಗಳು ಪ್ರತಿನಿಧಿಸುವ ವೈಚಾರಿಕತೆ, ಆಧುನಿಕತೆಗಳು ಪುರುಷನಿಷ್ಠತೆಯ ಪೋಷಣೆಯ ಮೌಲ್ಯಗಳ ವಿನಾಶಕ ಹೋರಾಟವಾಗಿದೆ. ಇದನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವುದರ ಮೂಲಕ ಸ್ತ್ರೀವೈಚಾರಿಕತೆಯನ್ನು ಅರ್ಥೈಸಬೇಕಾಗಿದೆ. ಅವುಗಳಲ್ಲಿ ಸುನಾಲಿನಿ, ಭಾಗೀರಥಿ (ಸರಸಮ್ಮನ ಸಮಾಧಿ), ಮೂಕಜ್ಜಿ (ಮೂಕಜ್ಜಿಯ ಕನಸುಗಳು), ಚಂದ್ರಿ, ಮಂಜುಳೆ (ಮೈಮನಗಳ ಸುಳಿಯಲ್ಲಿ) ; ಸಾವಿತ್ರಿ, ಸತ್ಯಭಾಮೆ (ನಂಬಿದವರ ನಾಕ ನರಕ), ಮಾಲತಿ (ಕನ್ಯಾಬಲಿ); ಸರಸೋತಿ, ನಾಗವೇಣಿ (ಮರಳಿ ಮಣ್ಣಿಗೆ) ; ಗುಲಾಬಿ (ಜಾರುವ ದಾರಿಯಲ್ಲಿ) ; ಪಾರ್ವತಮ್ಮ (ಅಳಿದ ಮೇಲೆ) ; ಸೀತೆ, ಲಕ್ಷ್ಮೀ (ಮುಗಿದ ಯುದ್ಧ) ; ಸತ್ಯ (ಔದಾರ್ಯದ ಉರುಳಲ್ಲಿ) ಹಾಗೂ ತುಂಗಮ್ಮ (ಸ್ವಪ್ನದ ಹೊಳೆ) ಇವರನ್ನು ಈ ಹಿನ್ನೆಲೆಯಲ್ಲಿ ಸ್ತ್ರೀ ವೈಚಾರಿಕ ಪ್ರತೀಕಗಳಾಗಿ ನೋಡಬಹುದು. ಮಾತೃಪ್ರಧಾನ ಕುಟುಂಬ ಪದ್ಧತಿಯ ಮೂಲವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ ವಾತಾವರಣದಲ್ಲಿ ಮೈದಾಳುವ ಕಾರಂತರ ಕಾದಂಬರಿಗಳು ಅಲ್ಲಿನ ಮಣ್ಣಿನ ವಾಸನೆಯನ್ನು ಪ್ರತಿನಿಧಿಸುತ್ತವೆ. ಸ್ತ್ರೀವಾದದ ಸ್ತ್ರೀ ವೈಚಾರಿಕ ದೃಷ್ಟಿಕೋನ, ಸ್ತ್ರೀ ಶೋಷಣೆಯ ವಿರುದ್ಧ ಎಚ್ಚೆತ್ತ ಧ್ವನಿ - ಇವುಗಳಿಂದ ರೂಪುಗೊಂಡ ಸ್ತ್ರೀನಿಷ್ಠ ಬದುಕನ್ನು ಕಾರಂತರ ಕಾದಂಬರಿಗಳ ಮುಖಾಂತರ ಗ್ರಹಿಸಲು ಸಾಧ್ಯ.

ವಿಧವಾ ವಿವಾಹ, ವೇಶ್ಯಾ ಪದ್ಧತಿಯ ನಿರಾಕರಣೆ , ಸತಿಸಹಗಮನ ಇನ್ನೂ ಮುಂತಾದ ಸಾಮಾಜಿಕ ಮೌಢ್ಯಗಳನ್ನು ಕಾರಂತರು ಖಂಡಿಸುತ್ತಾರೆ. ದಲಿತ ಸ್ತ್ರೀಯರ ಸಮಸ್ಯೆಗಳನ್ನು ಕಾರಂತರು ಪ್ರಾಮಾಣಿಕ ದೃಷ್ಟಿಯಿಂದ ಗಮನಿಸಿ ಬರೆಯುತ್ತಾರೆ. ಅವರ ಮೇಲಾಗುವ ಅತ್ಯಾಚಾರ, ದೌರ್ಜನ್ಯ, ಆಕ್ರಮಣ ನೀತಿಯ ವಿರುದ್ಧ ದನಿಯಾಗುತ್ತಾರೆ. ದಲಿತ ಸಂವೇದನೆಯ ಪ್ರಾತಿನಿಧಿಕ ಕಾದಂಬರಿಯಾದ 'ಚೋಮನ ದುಡಿ' (೧೯೩೩) ಯಲ್ಲಿ ಅಸ್ಪೃಶ್ಯರು ಎದುರಿಸುತ್ತಿದ್ದ ಸಾಮಾಜಿಕ ಅನ್ಯಾಯಗಳ ವಿರುದ್ಧ ಕಾರಂತರು ದನಿಯೆತ್ತಿದ್ದಾರೆ. ಇಲ್ಲಿ ಭೂಮಿಯ ಸಮಸ್ಯೆ ಹಾಗೆಯೇ ಬೆಳ್ಳಿಯ ಬದುಕಿನ ದುರಂತಗಳನ್ನು ಗಂಭೀರವಾಗಿ ಕಾರಂತರು ಪರಿಗಣಿಸುತ್ತಾರೆ. ಬೆಳ್ಳಿಯ ಕುಟುಂಬದ ಬಡತನ ; ಅದರಿಂದಾದ ಸಾಲ - ಬೆಳ್ಳಿಯ ಮೇಲಾಗುವ ಲೈಂಗಿಕ ಶೋಷಣೆಯ ವಿವಿಧ ಮುಖಗಳನ್ನು ಕಾರಂತರು ಪರಿಚಯಿಸುತ್ತಾರೆ. ಅದರಂತೆ ಗುಡ್ಡಗಾಡು ಜನರ ಸಾಮಾಜಿಕ ಸಂರಚನೆ, ಮೇಲ್ವರ್ಗದವರಿಂದಾಗುವ

ದೌರ್ಜನ್ಯ, ಮಲೆಕುಡಿಯರ ಬದುಕಿನ ವಿವಿಧ ಸಮಸ್ಯೆಗಳನ್ನು ಬಿಂಬಿಸುವ 'ಕುಡಿಯರ ಕೂಸು' ಒಂದು ಬಗೆಯ ಕಾವ್ಯಾತ್ಮಕ ಸಂವೇದನೆಯಾಗಿ ನಿಲ್ಲುತ್ತದೆ. ಮಲೆ ಕುಡಿಯರ ಸ್ತ್ರೀಜಗತ್ತಿನ ಒಳನೋಟಗಳನ್ನು ಕಾರಂತರು ಪರಿಚಯಿಸುತ್ತಾರೆ. ಕಾರಂತರು ತಮ್ಮ ಕಾದಂಬರಿಗಳಲ್ಲಿಯ ಪುರುಷ ಪಾತ್ರಗಳನ್ನು ಚಿತ್ರಿಸುವಾಗ ಹೆಚ್ಚಾಗಿ ಆರೋಗ್ಯದ ಬಗ್ಗೆ ಪದೇ ಪದೇ ವಿವರಿಸುತ್ತಾರೆ. ಸಾಮಾಜಿಕ ಕಳಕಳಿಯಿಂದ ಬರೆಯುವ ಇವರು 'ಪಲಾಯನವಾದಿ'ಗಳಾದ ಗಂಡಸರು ವಿಲಾಸಿ ಜೀವನಕ್ಕೆ ಮಾರುಹೋಗಿ ಆರೋಗ್ಯವನ್ನು ಹಾಳುಮಾಡಿಕೊಳ್ಳುವ ಪ್ರಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ವೇಶ್ಯೆಯರ, ಪರಸ್ತ್ರೀಯರ ಸಂಗದಿಂದ ಲೈಂಗಿಕ ರೋಗವನ್ನು ತಗುಲಿಸಿಕೊಂಡು ತಮ್ಮ ಹೆಂಡತಿಯರಿಗೆ ನರಕಯಾತನೆಯನ್ನು ಕೊಡುವ ಅಂಶವನ್ನು ಬಹುಶಃ ಕಾರಂತರು ಬಹಳ ಗಂಭೀರವಾಗಿಯೇ ಪರಿಗಣಿಸುತ್ತಾರೆ. ಇಲ್ಲಿಯ ಸ್ತ್ರೀಯರ ಮಾನವೀಯ ಮೌಲ್ಯಗಳು ಆಧುನಿಕ ಜಗತ್ತಿಗೂ ಅನ್ವಯಿಸುವಂತಹ ಸಾಮಾಜಿಕ 'ಮೌಲ್ಯ' ಗಳಾಗಿವೆಯೆಂಬುದು ಸಾರ್ವಕಾಲಿಕ ಸತ್ಯವಾಗಿದೆ. ಕಾರಂತರು ವಾಸ್ತವವಾದಿ ಜೀವನ ಮೌಲ್ಯಗಳನ್ನು ಪ್ರತಿಪಾದಿಸುತ್ತಾರೆ.

ಮಹಿಳಾ ಬರಹಗಾರರ ಸಾಲಿನಲ್ಲಿ ಶಿವರಾಮ ಕಾರಂತರ ಸಾಹಿತ್ಯ ಕೃತಿಗಳು ಸ್ವಲ್ಪ ಭಿನ್ನವಾಗಿಯೇ ಪರಿಗಣಿಸಲ್ಪಡುತ್ತವೆ. ಏಕೆಂದರೆ ಪುರುಷ ಬರಹಗಾರನೊಬ್ಬ ಸ್ತ್ರೀವಾದಿಯಾಗಿ ಬರೆಯುವ ಹಾಗೂ ಸ್ತ್ರೀ ಬರಹಗಾರ್ತಿಯೊಬ್ಬಳು ಸ್ತ್ರೀಯ ಅನುಭವಗಳನ್ನು ಬರೆಯುವಾಗ ಭಿನ್ನವಾಗಿಯೇ ಬರೆಯುತ್ತಾರೆ. ಆದರೆ ಕಾರಂತರ ವಿಚಾರದಲ್ಲಿ ಮಾತ್ರ ಅವರ ಸ್ತ್ರೀವಾದಿ ನಿಲುವುಗಳು 'ಸ್ತ್ರೀವಾದಿ'ಯಾಗಿಯೇ ಅವರ ಅನುಭವ ಜಗತ್ತನ್ನು ಹೆಂಗರುಳಾಗಿ ಚಿತ್ರಿಸುತ್ತಾರೆ. ಆದರೆ ತಿರುಮಲಾಂಬ, ಕೊಡಗಿನ ಗೌರಮ್ಮ, ಕಲ್ಯಾಣಮ್ಮ, ಸರಸ್ವತಿ ಬಾಯಿ ಮುಂತಾದ ಸ್ವಾತಂತ್ರ್ಯಪೂರ್ವ ಮಹಿಳಾ ಕಾದಂಬರಿಕಾರರಿಗೆ ಈ ಬಗೆಯ ವೈಚಾರಿಕತೆಯನ್ನು ಬೆಳೆಸಿಕೊಳ್ಳಲಾಗಲಿಲ್ಲ. ಮುಂದೆ ಇಂದಿರಾ, ಎಂ.ಕೆ. ಹಾಗೂ ತ್ರಿವೇಣಿ ಮುಂತಾದವರು ಹೊಸ ಆಶಯಗಳನ್ನು ತಮ್ಮ ಕೃತಿಗಳಲ್ಲಿ ಕಾಣಿಸಿದ್ದಾರೆ. ಆದರೆ 'ಇಂದಿರಾ' ಮತ್ತು 'ಇಂದಿರಾ ಬಾಯಿ' ಕಾದಂಬರಿಗಳ ಸ್ತ್ರೀಪರ ಕಾಳಜಿಗಳನ್ನು ಗಮನಿಸಿದರೆ, ಕಾರಂತರ ಕಾದಂಬರಿಗಳ ವಾಸ್ತವವಾದಿ ಧೋರಣೆ ಅವುಗಳಿಗಿಂತ ವಿಭಿನ್ನ ಸ್ವರೂಪದಲ್ಲಿ ವ್ಯಕ್ತವಾಗಿದೆ.

ನವೋದಯ ಕಾಲಘಟ್ಟದ ಕಾದಂಬರಿಗಳು ಸ್ತ್ರೀ ಸಂವೇದನೆಗೆ ಸ್ಪಂದಿಸಿದ ಹಾಗೆ ನವ್ಯಕಾಲದ ಕಾದಂಬರಿಗಳು ಸ್ತ್ರೀವಾದಿ ದೃಷ್ಟಿಗೆ ಅಷ್ಟೊಂದು ಸ್ಪಂದಿಸಿಲ್ಲ. ನವ್ಯೋತ್ತರ ಅಥವಾ ದಲಿತ ಬಂಡಾಯ ಕಾದಂಬರಿ ಪ್ರಕಾರವು

ಸ್ತ್ರೀವಾದಿ ವಿಮರ್ಶಾ ಪರಿಕಲ್ಪನೆಯ ಹಿನ್ನೆಲೆಯಲ್ಲಿಯೇ ರಚಿತವಾಗಿವೆ. ಕಾರಂತರ ಸಾಹಿತ್ಯಕ ನಿಲುವುಗಳು, ಧೋರಣೆಗಳನ್ನು ನವ್ಯೋತ್ತರ ಸಾಹಿತ್ಯ ಪ್ರಕಾರವು ಸ್ಪರ್ಶಿಸಿದೆ ಎನ್ನಬಹುದು. ಶಿವರಾಮ ಕಾರಂತರ ಬೃಹತ್ತಾದ ಸಾಹಿತ್ಯದ ರಾಶಿಯಲ್ಲಿ ಕಾದಂಬರಿ ಕ್ಷೇತ್ರವು ತನ್ನದೇ ಆದ ಸ್ಥಾನಮಾನವನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ಥಾಪಿಸಿಕೊಂಡಿದೆ. ಅವರ ಕಾದಂಬರಿಗಳ ಕುರಿತು ಕೆಲವು ಮಹತ್ವದ ಸಂಶೋಧನೆಗಳು ನಡೆದಿವೆ. ಅವುಗಳನ್ನು ಕುರಿತು ಅವಲೋಕನ ಮಾಡುವುದು ಸೂಕ್ತವೆನಿಸುತ್ತದೆ.

ಕರುಣಾಕರ ಎನ್. ಶೆಟ್ಟಿಯವರು ಎಂ.ಫಿಲ್., ಪದವಿಗಾಗಿ ದಲಿತ ಸಂವೇದನೆಯನ್ನಿಟ್ಟುಕೊಂಡು "ಶಿವರಾಮ ಕಾರಂತರ ಚೋಮನ ದುಡಿ ಮತ್ತು ಪ್ರೇಮ್ ಚಂದರ ಗೋದಾನ ಕಾದಂಬರಿಗಳ ತೌಲನಿಕ ಅಧ್ಯಯನ " (೧೯೯೪) ಎಂಬ ವಿಷಯ ಕುರಿತಂತೆ ಸಂಶೋಧನೆಯನ್ನು ಮಾಡಿದ್ದಾರೆ. ಇದು ಕಾರಂತ ಮತ್ತು ಪ್ರೇಮ್ ಚಂದ್ ಅವರ ಎರಡು ಕಾದಂಬರಿಗಳ ತೌಲನಿಕ ಅಧ್ಯಯನವಾಗಿದೆ. ಇದು ಸ್ತ್ರೀವಾದಿ ಅಧ್ಯಯನ ಮಾದರಿಯನ್ನು ಕೇಂದ್ರೀಕರಿಸಿಕೊಂಡಿಲ್ಲ. ಹಾಗೆಯೇ ಕಾರಂತರ 'ಅಳಿದ ಮೇಲೆ' ಕಾದಂಬರಿಯನ್ನು ಕೇಂದ್ರೀಕರಿಸಿಕೊಂಡು ಜಬ್‌ನೂರ್ ಶಿವರಾಜ್ ತುಕ್ಕಪ್ಪ ಅವರ "ಡಾ. ಶಿವರಾಮ ಕಾರಂತರ 'ಅಳಿದ ಮೇಲೆ' : ಒಂದು ಅಧ್ಯಯನ " (೧೯೯೯) ಎಂಬುದು ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ ಪ್ರಬಂಧವಾಗಿದೆ. ಇದರಲ್ಲಿ 'ಅಳಿದ ಮೇಲೆ' ಕಾದಂಬರಿಯೊಂದನ್ನು ಮಾತ್ರ ವಿಶ್ಲೇಷಣಾತ್ಮಕ ಅಧ್ಯಯನದ ಮೂಲಕ ನೋಡಲಾಗಿದೆ. ಇದೂ ಕೂಡ ಪ್ರಸ್ತುತ ಅಧ್ಯಯನಕ್ಕಿಂತ ಭಿನ್ನವಾಗಿದೆ.

"ಕಾರಂತರ ಕಾದಂಬರಿಗಳು - ವಿಮರ್ಶಾವಲೋಕನ " (೧೯೯೫) ಎಂಬ ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ಡಿ.ಟಿ. ರಂಗಸ್ವಾಮಿಯವರು ಶಿವರಾಮ ಕಾರಂತರ ರಾಜಕೀಯ ಕಾದಂಬರಿಗಳನ್ನು ಮಾತ್ರ ಕೇಂದ್ರೀಕರಿಸಿಕೊಂಡು ಈ ಸಂಶೋಧನೆಯನ್ನು ಕೈಗೊಂಡಿದ್ದಾರೆ. ಇದರಲ್ಲಿ ಕಾರಂತರ ರಾಜಕೀಯ ವಿಡಂಬನೆಯ ಅಂಶಗಳನ್ನು ಮಾತ್ರ ಅವಲೋಕಿಸಲಾಗಿದೆ. ಇದು ಸ್ತ್ರೀನಿಷ್ಠ ಓದಿನಿಂದ ಹೊರತಾಗಿದೆ.

ಸುನೀತಾ ಎಂ. ಶೆಟ್ಟಿ ಅವರು ಮುಂಬೈ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ “ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ : ಒಂದು ಅಧ್ಯಯನ ” (೧೯೯೯)[೧] ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಶಿವರಾಮ ಕಾರಂತರ ಕಾದಂಬರಿಗಳನ್ನು ಸ್ತ್ರೀನಿಷ್ಠ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಕಾರಂತರ ಕಾದಂಬರಿಗಳಲ್ಲಿ ನಿಸರ್ಗ ಮತ್ತು ಲೈಂಗಿಕ ಸಂಬಂಧ, ಸ್ತ್ರೀ ಮತ್ತು ವೈಚಾರಿಕತೆ, ಭಾರತೀಯ ನಾರಿ ನಡೆದು ಬಂದ ದಾರಿ ಎಂಬ ಉದ್ದೇಶ ವ್ಯಾಪ್ತಿಯೊಂದಿಗೆ ಇವರ ಅಧ್ಯಯನ ತೆರೆದುಕೊಳ್ಳುತ್ತದೆ. ಇದು ಮರಾಠಿ, ಹಿಂದಿ ಕಾದಂಬರಿಗಳ ತೌಲನಿಕ ಅಧ್ಯಯನವಾಗಿದ್ದು, ಆಧುನಿಕ ಸ್ತ್ರೀವಾದದ ತಾತ್ವಿಕ ಪರಿಭಾಷೆಯನ್ನು ಅನ್ವಯಗೊಳಿಸುವುದರಿಂದ ಸಂಪೂರ್ಣ ಭಿನ್ನವಾಗುತ್ತದೆ. ಎಲ್.ಸಿ. ಸುಮಿತ್ರಾ ಅವರು ಕುವೆಂಪು ವಿಶ್ವವಿದ್ಯಾನಿಲಯಕ್ಕಾಗಿ ಸಿದ್ಧಪಡಿಸಿದ ಪಿಎಚ್.ಡಿ. ಮಹಾಪ್ರಬಂಧ “ಕುವೆಂಪು ಮತ್ತು ಕಾರಂತರ ಕಾದಂಬರಿಗಳಲ್ಲಿ ಪ್ರಕೃತಿ” (೨೦೦೨)[೨] ಎಂಬ ಸಂಶೋಧನೆಯು ಕುವೆಂಪು ಮತ್ತು ಕಾರಂತರ ಕಾದಂಬರಿಗಳಲ್ಲಿ ಕಂಡುಬರುವ ಪ್ರಕೃತಿಯ ತೌಲನಿಕ ಅಧ್ಯಯನವಾಗಿದೆ. ಇದು ಸ್ತ್ರೀವಾದಿ ಅಧ್ಯಯನದ ವ್ಯಾಪ್ತಿಗೆ ಬರುವುದಿಲ್ಲ.

“ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀಸಂವೇದನೆ” (೨೦೦೩) ಎಂಬ ಪಿಎಚ್.ಡಿ. ಮಹಾಪ್ರಬಂಧವನ್ನು (ಅಪ್ರಕಟಿತ) ಶುಭಾದಾಸ್ ಅವರು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆ. ಈ ಸಂಶೋಧನಾ ಅಧ್ಯಯನದಲ್ಲಿ ಅವರು ಸ್ತ್ರೀವಾದಿ ಚಳುವಳಿ ಮತ್ತು ಸಾಹಿತ್ಯ ವಿಮರ್ಶೆ, ಕಾದಂಬರಿ ಮತ್ತು ಸ್ತ್ರೀಸಂವೇದನೆ, ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪ್ರಾದೇಶಿಕ - ಸಾಂಸ್ಕೃತಿಕ ಅಧ್ಯಯನ, ಸ್ತ್ರೀ ಸಂವೇದನೆಯ ನೆಲೆಗಳು, ಆಧುನಿಕ ಭಾರತೀಯ ಸ್ತ್ರೀವಾದಕ್ಕೆ ಕಾರಂತರ ಕೊಡುಗೆ ಮತ್ತು ಕಾರಂತರ ಕಾದಂಬರಿಗಳ ಭಾಷೆ - ಶೈಲಿ, ತಂತ್ರ - ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ಸಂಶೋಧನೆಯನ್ನು ಮಾಡಿದ್ದಾರೆ. ಹೀಗೆ ಕಾರಂತರ ಕಾದಂಬರಿಗಳನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಹಾಗಾಗಿ ಪ್ರಸ್ತುತ ಸಂಶೋಧನೆಯು ಭಿನ್ನ ಉದ್ದೇಶವನ್ನೊಳಗೊಂಡಿದೆ. ಆದ್ದರಿಂದ ಕಾರಂತರ ಕಾದಂಬರಿಗಳನ್ನು ಇನ್ನೊಂದು ರೀತಿಯ ದೃಷ್ಟಿಕೋನದಿಂದ ಶೋಧಿಸುವ ಅಗತ್ಯವಿದೆ.

---

೧. *ಸುನೀತಾ ಎಂ. ಶೆಟ್ಟಿ, ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ, ೨೦೦೦.*

೨. *ಎಲ್.ಸಿ. ಸುಮಿತ್ರಾ, ಕಾಡು ಕಡಲು, ೨೦೦೩.*

ಮುನಿಯಪ್ಪ ಅವರು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ. ಪದವಿಗಾಗಿ "ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯಪ್ರಜ್ಞೆ - ಒಂದು ಅಧ್ಯಯನ " (೨೦೦೪) ಎಂಬ ಸಂಶೋಧನಾತ್ಮಕ ಮಹಾಪ್ರಬಂಧ (ಅಪ್ರಕಟಿತ) ವನ್ನು ಮಂಡಿಸಿದ್ದಾರೆ. ಈ ಅಧ್ಯಯನವೂ ಸಹ ಕಾರಂತರ ರಾಜಕೀಯ ಪ್ರಜ್ಞೆ, ರಾಜಕೀಯವನ್ನೇ ಕೇಂದ್ರ ಬಿಂದುವಾಗಿಟ್ಟುಕೊಂಡ ಕಾದಂಬರಿಗಳ ಅಧ್ಯಯನವಾಗಿದೆ. ಇದು ಸ್ತ್ರೀನಿಲುವಿನ ಗ್ರಹಿಕೆಯನ್ನು ಹೊರತುಪಡಿಸಿದೆ.

ಹಾಗಾಗಿ ಪ್ರಸ್ತುತ ಅಧ್ಯಯನದ ಉದ್ದೇಶವು, ಕಾರಂತರ ಕಾದಂಬರಿಗಳ ಇದುವರೆಗಿನ ಸ್ತ್ರೀನಿಷ್ಠ ಪ್ರಜ್ಞೆಯ ವಿಮರ್ಶಾಮಾನದಂಡಗಳನ್ನು ಅಧ್ಯಯನ ಮಾಡುವ ಮುಖಾಂತರ ಆಧುನಿಕ ಸ್ತ್ರೀವಾದಿ ನಿಲುವುಗಳ ಪರಿಕಲ್ಪನೆಗಳನ್ನು ಗ್ರಹಿಸುವುದರೊಂದಿಗೆ ಸಂಶೋಧನೆ ಮಾಡಬೇಕಾಗಿದೆ. ಸ್ತ್ರೀವಾದದ ತಾತ್ತ್ವಿಕತೆಯ ಹಿನ್ನೆಲೆಯೊಂದಿಗೆ ಈ ಅಧ್ಯಯನ ಪ್ರಾರಂಭವಾಗುತ್ತದೆ. ಶಿವರಾಮ ಕಾರಂತರು ಸಾಮಾಜಿಕ ಪ್ರಜ್ಞೆಯನ್ನು ವ್ಯಕ್ತಿನಿಷ್ಠೆಯಿಂದ ಗ್ರಹಿಸಲು ಪ್ರಯತ್ನಿಸುತ್ತಾರೆ. ಹೀಗೆ ವ್ಯಷ್ಟಿ ಪ್ರಜ್ಞೆಯಿಂದ ಸಮಷ್ಟಿ ಪ್ರಜ್ಞೆಯ ಕಡೆಗೆ ತುಡಿಯುವ ಕಾರಂತರ ಸ್ತ್ರೀ ಪಾತ್ರಗಳು ಆಧುನಿಕ ಜಗತ್ತಿನ ಪ್ರಕ್ರಿಯೆಗಳಿಗೆ ಕ್ಷಿಪ್ರವಾಗಿ ಪ್ರತಿಕ್ರಿಯಿಸುತ್ತವೆ. ಇಲ್ಲಿಯ ಸ್ತ್ರೀಯರು ಕಾದಂಬರಿಯ ಜೀವ ಶಕ್ತಿಯ ಪ್ರತಿಮೆಗಳಾಗಿ ಕಂಡುಬರುತ್ತಾರೆ. ಇವುಗಳು ವ್ಯಕ್ತಪಡಿಸುವ ಸಂವೇದನೆಯು ಸಾಮಾಜಿಕ ಸ್ತ್ರೀತ್ವದ ಮಾದರಿಗಳಾಗಿ ಕಂಡುಬರುತ್ತವೆ. ಆದುದರಿಂದ ಪ್ರಸ್ತುತ ಸಂಶೋಧನೆಯಲ್ಲಿ ಆಯ್ದ ಪ್ರಮುಖ ಕಾರಂತರ ಕಾದಂಬರಿಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಅಧ್ಯಯನ ನಡೆಸಲಾಗುತ್ತಿದೆ. ಅವುಗಳಲ್ಲಿ ಪ್ರಧಾನವಾಗಿ ಸ್ತ್ರೀಪಾತ್ರಗಳನ್ನು ಅಧ್ಯಯನ ಮಾಡಲಾಗುವುದು.

ಪ್ರಸ್ತುತ ಸಂಶೋಧನೆಯು ಸಾಹಿತ್ಯಕ, ಸಾಂಸ್ಕೃತಿಕ ಪರಿಸರದ ಆವರಣದಲ್ಲಿಯೇ ಅನಾವರಣಗೊಳ್ಳುವ ಸ್ತ್ರೀತ್ವದ ಪ್ರತೀಕಗಳು, ಸ್ತ್ರೀವಾದಿ ತಾತ್ತ್ವಿಕ ಚಿಂತನೆಯನ್ನು ಒಳಗೊಂಡಿದೆ. ಮಹಿಳಾ ಅಧ್ಯಯನ, ಚಳುವಳಿಗಳು ಮತ್ತು ಹೋರಾಟಗಳು ಪ್ರಸ್ತುತವೆನಿಸುವ ಈ ಸಂದರ್ಭದಲ್ಲಿ ಶಿವರಾಮ ಕಾರಂತರಂತಹ ರಾಷ್ಟ್ರೀಯ ಪ್ರತಿಭೆಯ ಚಿಂತನೆಯ ಅಂಶವೂ ಇಲ್ಲಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಮಿತಿಗಳು ಕಂಡುಬಂದರೆ, 'ಕಾರಂತರ ಕಾದಂಬರಿಗಳ ಅಧ್ಯಯನ ಸ್ತ್ರೀವಾದ - ಸ್ತ್ರೀತ್ವ ಮತ್ತು ಸ್ತ್ರೀ ಇವುಗಳ ತಾತ್ತ್ವಿಕ ಚರ್ಚೆ'ಯನ್ನು ಎರಡನೆಯ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಇದರಲ್ಲಿ ಸ್ತ್ರೀತ್ವದ ತಾತ್ತ್ವಿಕ ಪರಿಕಲ್ಪನೆಯ

ನಿರ್ವಚನ ಮಾಡಲಾಗಿದೆ. ಮಾತೃಮೂಲೀಯ ಕೌಟುಂಬಿಕ ಪರಿಸರದಲ್ಲಿ ಸ್ತ್ರೀವಾದಿ ನೆಲೆಗಳನ್ನು ಗುರುತಿಸಲಾಗುವುದು. ಮೂರನೆಯ ಅಧ್ಯಾಯದಲ್ಲಿ 'ಕಾರಂತರ ಕಾದಂಬರಿಗಳಲ್ಲಿ ಕುಟುಂಬ ಕೇಂದ್ರಿತ ಸ್ತ್ರೀತ್ವದ ಮಾದರಿಗಳು' ಎಂಬ ಪರಿಕಲ್ಪನೆಯಡಿಯಲ್ಲಿ ಸ್ತ್ರೀತ್ವ - ಕುಟುಂಬ ಶಕ್ತಿಯಾಗಿ ಕಂಡುಕೊಂಡಿರುವ ಪ್ರಕ್ರಿಯೆಗಳು, ಬಂಜೆ *v/s* ತಾಯ್ತನ ; ವಿಧವೆ *v/s* ಮುತ್ತೈದೆ - ಈ ಅಂಶಗಳ ತಾತ್ವಿಕ ನೆಲೆಯಲ್ಲಿ ಕಾರಂತರ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳ ಅವಲೋಕನ, ಕೌಟುಂಬಿಕ ಕೇಂದ್ರದಲ್ಲಿ ಸ್ತ್ರೀಯ ಅಧಿಕಾರ - ಅಧಿಕಾರೇತರ ಪ್ರಕ್ರಿಯೆಗಳನ್ನು ವಿವರಿಸಲಾಗಿದೆ.

'ಕಾರಂತರ ಕಾದಂಬರಿಗಳಲ್ಲಿ ಸ್ತ್ರೀತ್ವದ ಪ್ರತೀಕಗಳು - ಸಮಾಜಮುಖಿ' ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಕಾರಂತರ ದೃಷ್ಟಿಕೋನದಲ್ಲಿ ಕಂಡುಬರುವ ಸ್ತ್ರೀಪ್ರತೀಕಗಳನ್ನು ಹೀಗೆ ಕಂಡುಕೊಳ್ಳಲಾಗಿದೆ. ನಿಸರ್ಗ, ಭೂಮಿ, ದೈವ, ಸಮಾಜ ಹಾಗೂ ರಾಜಕಾರಣ ಕೇಂದ್ರಿತ ಸ್ತ್ರೀತ್ವದ ಪ್ರತೀಕಗಳನ್ನು ಅವರ ಕಾದಂಬರಿಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ. ಅಧ್ಯಾಯ ಐದರಲ್ಲಿ 'ಕಾರಂತರ ಕಾದಂಬರಿಗಳಲ್ಲಿ ಸ್ತ್ರೀತ್ವದ ಪರಿಕಲ್ಪನೆಗಳು : ಪ್ರತಿಮಾತ್ಮಕ ಹಿನ್ನೆಲೆ ' ಎಂಬ ಶೀರ್ಷಿಕೆಯಲ್ಲಿ ಕಾರಂತರ ಪರಿಕಲ್ಪನೆಯಲ್ಲಿ ಗಂಡು - ಹೆಣ್ಣಿನ ಸಂಬಂಧಗಳಲ್ಲಿಯ ದ್ವಂದ್ವಾತ್ಮಕ ಚಿಂತನೆಯ ಕ್ರಮಗಳ ಮೂಲಕ ಸ್ತ್ರೀ ಮತ್ತು ಪುರುಷರ ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಗಳನ್ನು ಕಾಣಬಹುದು. ಕಲೆ, ಸಂಗೀತ, ಸಾಹಿತ್ಯ ಇವುಗಳ ಪರಂಪರೆಗಳ ನಡುವ ಸ್ತ್ರೀ ನಡೆದು ಬಂದ ಸ್ಥೂಲ ನೋಟವನ್ನು ಕಾರಂತರ ಸ್ತ್ರೀ ಪಾತ್ರಗಳ ಮುಖಾಂತರ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ. ಆರನೆಯ ಅಧ್ಯಾಯವಾದ 'ಸಮಾರೋಪ ' ದಲ್ಲಿ ಪ್ರಸ್ತುತ ಸಂಶೋಧನೆಯ ಅಧ್ಯಯನ, ವಿಮರ್ಶನ, ವಿಶ್ಲೇಷಣಾತ್ಮಕ ಪ್ರಕ್ರಿಯೆಗಳಿಂದ ತರ್ಕಿಸಿದ, ಶೋಧಿಸಿದ, ಸಮೀಕ್ಷಿಸಿದ, ಚರ್ಚೆಯಿಂದ ಕಂಡುಕೊಂಡ ವಿಷಯಗಳನ್ನು ಕ್ರೋಢೀಕರಿಸಲಾಗಿದೆ. ಪ್ರಸ್ತುತ ಸಂಶೋಧನ ಕ್ಷೇತ್ರದ ಬಗ್ಗೆ ಮುಂದೆ ಶೋಧಿಸಬೇಕಾದ ಹೊಸ ಸಾಧ್ಯತೆಗಳ ಕುರಿತು ವಿಶೇಷ ಗಮನ ಸೆಳೆಯಲಾಗುವುದು.

ಕಾರಂತರ ಕಾದಂಬರಿಗಳ ವಿಸ್ತಾರ ತುಂಬಾ ಆಳವಾದ, ವಿಸ್ತೃತವಾದ ಎಲ್ಲೆಯನ್ನು ಹೊಂದಿದೆ. ಅವರ ಕಾದಂಬರಿಗಳ ಅಧ್ಯಯನ, ಶೋಧನ ಹಲವಾರು ದೃಷ್ಟಿಕೋನಗಳಿಂದ ನಡೆಸುವ ಸಾಧ್ಯತೆ ಇದ್ದಾಗ್ಯೂ ಕೂಡಾ ಅವುಗಳದೇ ಆದ ಮಿತಿಗಳನ್ನು ಹೊಂದಿವೆ. ಜೊತೆಗೆ ಅವುಗಳ ಅಂತರ್ಯದಲ್ಲಿ ಹಲವಾರು ದ್ವಂದ್ವಗಳನ್ನು ಹೊಂದಿವೆ. ಈ ಅಧ್ಯಯನದ ವ್ಯಾಪ್ತಿ ಕಾರಂತರ ಕಾದಂಬರಿ ಪ್ರಪಂಚಕ್ಕೆ ಸೀಮಿತವಾಗಿರುವುದರಿಂದ ಅವರ ಇತರ ಕೃತಿಗಳ ಸಮಗ್ರ ಅಧ್ಯಯನವಾಗುವುದಿಲ್ಲ. ಇದರಿಂದ ಅವರ ಒಟ್ಟು ಸಾಹಿತ್ಯದ ನಿಲುವು ಇದೇ ಎಂದು ಹೇಳಲು

ಬರುವುದಿಲ್ಲ. ಕಾರಂತರ ಕೆಲವು ಕಾದಂಬರಿಗಳು ಈ ಅಧ್ಯಯನದ ವ್ಯಾಪ್ತಿಗೆ ಬರುವುದಿಲ್ಲವಾದುದರಿಂದ ಅವುಗಳ ಭಾವಗ್ರಹಿಕೆ ತಪ್ಪಿಹೋಗುವ ಸಾಧ್ಯತೆ ಇದೆ. ಆದುದರಿಂದ ಸ್ತ್ರೀಯ ಅಸ್ತಿತ್ವ ಮತ್ತು ವ್ಯಕ್ತಿತ್ವಕ್ಕೂ ಇರುವ ದ್ವಂದ್ವಗಳು ಕಂಡುಬರುತ್ತವೆ. ವಸಾಹತುಶಾಹಿ, ದೇಶೀಯ ಸಾಂಸ್ಕೃತಿಕ ದ್ವಂದ್ವ, ದಾಂಪತ್ಯದೊಳಗಿನ ದ್ವಂದ್ವ ; ವೈಚಾರಿಕತೆ ಮತ್ತು ಸಾಂಪ್ರದಾಯಿಕತೆಗಳ ದ್ವಂದ್ವ, ಗರತಿ, ವೇಶ್ಯೆ, ಪರಿತ್ಯಕ್ತೆಯರ ನಡುವಿನ ವೈರುಧ್ಯ ಇತ್ಯಾದಿ ಹತ್ತು ಹಲವು ವೈರುಧ್ಯ, ಸಂಘರ್ಷ, ದ್ವಂದ್ವಾತ್ಮಕತೆಯನ್ನು ಕಾರಂತರ ಸ್ತ್ರೀಯರು ಎದುರಿಸಬೇಕಾದ ಅಕಸ್ಮಿಕಗಳು ಕಂಡುಬರುತ್ತವೆ. ಹೀಗೆ ಕಾರಂತರ ಕಾದಂಬರಿಗಳು ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಅವರ ಸ್ತ್ರೀ ಪಾತ್ರಗಳು ಸಂಘರ್ಷಾತ್ಮಕ ಪರಿವೇಷದೊಳಗೆ ವಿಭಿನ್ನ ದೃಷ್ಟಿಕೋನದಲ್ಲಿ ಸಮಾವೇಶಗೊಳ್ಳುವ ರೀತಿ ಅನನ್ಯವಾದುದು.

ಒಟ್ಟಿನಲ್ಲಿ ಈ ರೀತಿಯ ಸ್ತ್ರೀತ್ವದ ದೃಷ್ಟಿಕೋನದ ಅಧ್ಯಯನಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅತಿ ಮುಖ್ಯವಾಗಿವೆ. ಆದ್ದರಿಂದ ಒಬ್ಬ ಶ್ರೇಷ್ಠ ಕನ್ನಡದ ಬರಹಗಾರನ ಬರಹಗಳನ್ನು ಸಾಮಾಜಿಕ ಸಂದರ್ಭದಲ್ಲಿ ಪರಿಶೀಲಿಸಿ ನೋಡುವುದು ಅಗತ್ಯವಾಗಿದೆ.